(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2005ರ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(3) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(ಇ) ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ) ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : (ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, "2005ರ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚೀಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಎಕ್ಸ್‌ಪ್ಲೇನ್ ಮಾಡುತ್ತೀರಾ ? ಮಾಡಿ.

ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2005ನೇ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಈ ಸಂದರ್ಭದಲ್ಲಿ ಮಂಡಿಸಿದ್ದೇವೆ. ಈ ಒಂದು ಕ್ರಿಮಿನಲ್ ಪ್ರೋಸೀಜರ್ ಕೋಡ್‌ಗೆ ತಿದ್ದುಪಡಿ ತರತಕ್ಕಂಥ ಉದ್ದೇಶ ಅಂದರೆ, ಈಗಾಗಲೇ ನಾವು ನಮ್ಮ ರಾಷ್ಟ್ರದ ಅನೇಕ ನ್ಯಾಯಾಲಯಗಳಲ್ಲಿ ಅದರಲ್ಲೂ ವಿಶೇಷವಾಗಿ ಈ ಕ್ರಿಮಿನಲ್ ಜಸ್ಟೀಸ್ ವಿಚಾರದಲ್ಲಿ ಏನೊಂದು ಬದಲಾವಣೆಯಾಗಬೇಕು, ಸಮಗ್ರವಾದ ತಿದ್ದುಪಡಿಗಳಾಗಬೇಕು ಎನ್ನುವುದರ ಬಗ್ಗೆ ಅನೇಕ ಲಾ ಕಮಿಷನ್‌ಗಳು ಪ್ರಸ್ತಾಪ ಮಾಡಿವೆ. ಸನ್ಮಾನ್ಯ ಮಳಿಮಠ್‌ರವರು ಹಲವಾರು ಶಿಫಾರಸ್ಸುಗಳನ್ನು ಮಾಡಿದ್ದಾರೆ. ಈ ಸದನದಲ್ಲೂ ಸಹಿತ ಹಲವಾರು ಸಂದರ್ಭಗಳಲ್ಲಿ ಅಗಿರತಕ್ಕಂಥ, ನೀಡಿರತಕ್ಕಂಥ ಸಲಹೆಗಳ ಹಿನ್ನೆಲೆಯೊಳಗೆ ನಾವು ನಮ್ಮ ರಾಜ್ಯದ ವಿಶೇಷ ತಿದ್ದುಪಡಿಯಾಗಿ ಈ ಕಾನೂನು ಇಲಾಖೆಯವರು ಏನೊಂದು ನೀತಿಯನ್ನು ರೂಪಿಸಿದ್ದರು, ಆ ನೀತಿಯ ಹಿನ್ನೆಲೆಯೊಳಗೆ ಶಿಕ್ಷೆ ಚೌಕಾಸಿಗೆ ಅನುಕೂಲ ಮಾಡಿ, ಈ ವಿಧೇಯಕವನ್ನು ತಮ್ಮೆದುರು ಮಂಡಿಸಿದ್ದೇವೆ. ಬೇರೆ ಬೇರೆ ಭಾಗಗಳಲ್ಲಿ ರಾಷ್ಟ್ರಗಳಲ್ಲಿ ಎಲ್ಲಿ ಈ plea bargaining ಇದೆ, ಶಿಕ್ಷೆ ಚೌಕಾಸಿ

ಇದೆ, ಅಲ್ಲೆಲ್ಲಾ ಈಗ conviction rate ಸಹಿತ ಸುಮಾರು 9095 ಪರ್ಸೆಂಟ್ ಆಗುವುದನ್ನು ನಾವು ಗಮನಿಸಿದ್ದೇವೆ. ಆದರೆ, ನಮ್ಮ ದೇಶದಲ್ಲಿ ಈ conviction rate 56 ಪರ್ಸೆಂಟ್ ಸಹಿತ ಇವತ್ತು ಆಗುತ್ತಿಲ್ಲವೆನ್ನುವುದನ್ನು ಗಮನಿಸಿದ್ದೇವೆ. ಇದೊಂದು ಅತ್ಯಂತ ಮಹತ್ವದ ಹಾಗೂ ಐತಿಹಾಸಿಕವಾಗಿ ಆಗಬಹುದಾಗಿರತಕ್ಕಂಥ ಒಂದು ಮಸೂದೆ. ಇದರ ಜೊತೆಗೆ, ಈ ಒಂದು ಮಸೂದೆಯ 436(ಎ)ದ ಪ್ರಕಾರ, ಯಾರು . . .

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಬಿಲ್ ಕಾಪಿ ಇಲ್ಲ

ಶ್ರೀ ಹೆಚ್. ಕೆ. ಪಾಟೀಲ್ : ಬಿಲ್ ಕಾಪಿ ಹೋಗಿಲ್ಲವೆಂದು ಹೇಳುತ್ತಾರೆ.

ಶ್ರೀ ಕೆ. ಜಿ. ಬೋಪಯ್ಯ : ಕಾಪಿ ಬೇಕು ಅಧ್ಯಕ್ಷರೆ, ನಮಗೆ ಏನೂ ಅಂತಲೇ ಗೊತ್ತಾಗುತ್ತಿಲ್ಲ.

ಶ್ರೀ ಕೆ. ಜಿ. ಪಾಟೀಲ್ : ಕಾಪೀಸ್ ಕಳುಹಿಸಿಲ್ಲವಂತೆ ನೋಡಿ. ಕಾಪೀಸ್ ಸರ್ಕ್ಯುಲೇಟ್ ಮಾಡಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಕಾಪೀಸ್ ಇಲ್ಲ. ಮಧ್ಯಾಹ್ನ ಪ್ಲೇಸ್ ಮಾಡಿ.

ಅಧ್ಯಕ್ಷರು : ಕಾಪೀಸ್ ಕೊಟ್ಟಿಲ್ಲವೇನ್ರೀ ?

ಶ್ರೀ ಹೆಚ್. ಕೆ. ಪಾಟೀಲ್ : ಅಲ್ಲ ಮಾನ್ಯ ಶ್ರೀರಾಮರೆಡ್ಡಿಯವರೆ, ಈ 436(ಎ)ದಲ್ಲೇನು ಅಂದಿರಲ್ಲಾ, ಈಗ ವಿಚಾರಣಾಧೀನ ಖೈದಿಗಳು undertrials ಕೆಲವು ಜೈಲ್‌ನಲ್ಲಿ ಆ maximum period of punishment ಏನಿದೆ ಅದನ್ನು ಧಾಟಿಯೂ ಸಹಿತ ಜೈಲ್‌ನಲ್ಲಿರುತ್ತಾರೆ. ಅಂಥ undertrials ಏನಿದ್ದಾರೆ, ಅವರು ತಮ್ಮ ಮಾನವ ಹಕ್ಕು human right ಕಳೆದುಕೊಳ್ಳುತ್ತಾರೆ. ಅನವಶ್ಯಕವಾಗಿ ಸರ್ಕಾರಕ್ಕೆ ಹೊರೆಯಾಗಿರುತ್ತಾರೆ. ಆಮೇಲೆ, ಒಂದು ರೀತಿ ಯಾವ ಶಿಕ್ಷೆಗೆ ಸಹ ಒಳಪಡದೇ ಇರತಕ್ಕಂಥ ಒಂದು ಸ್ಥಿತಿ ನಿರ್ಮಾಣ ಆಗಿರತಕ್ಕಂಥ ಈ ಸಂದರ್ಭದಲ್ಲಿ ಒಂದು ವಿಶೇಷ ಪ್ರಾವಿಜನ್ 436(ಎ) ಮೂಲಕ ಯಾವ ಖೈದಿ ತನ್ನ maximum period of punishment ನ ಅರ್ಧ ಅವಧಿಯನ್ನು ಪೂರ್ಣಗೊಳಿಸಿರುತ್ತಾನೋ ಅಂಥವನ ಬಗೆಗೆ ಕೋರ್ಟ್‌ನವರಿಗೆ ಮಾಹಿತಿ ತಿಳಿದರೆ ಅಥವಾ ಯಾರಾದರೂ ಆ ಬಗ್ಗೆ ತಿಳಿಸಿದರೆ, ಸಂಘಟನೆಗಳು ತಿಳಿಸಿದರೆ, ಅವನನ್ನು ಕೂಡಲೇ ಬಿಡುಗಡೆ ಮಾಡಬೇಕು. ಅವಶ್ಯವಿದ್ದಲ್ಲಿ. ಬೇಲ್ ಅನ್ನು ಪಡೆದುಕೊಂಡು ಅಲ್ಲಿ Judicial Officer ಅವನನ್ನು ಬಿಡುಗಡೆ ಮಾಡಬೇಕು ಹಾಗೆ ಅನ್ನುವಂಥ ಒಂದು ಮಾನವ ಹಕ್ಕು ರಕ್ಷಣೆ ಮಾಡಬಹುದಾಗಿರತಕ್ಕಂಥ ಈ ಒಂದು ತಿದ್ದುಪಡಿಯನ್ನು ಈ ಸಂದರ್ಭದಲ್ಲಿ ಇಲ್ಲಿ ತಂದಿದ್ದೇನೆ. ಈ ಶಿಕ್ಷೆ ಚೌಕಾಸಿ ವಿಚಾರದಲ್ಲಿ ಈಗಾಗಲೇ ಬಹುಶಃ ನಮ್ಮ ರಾಷ್ಟ್ರದ ಪ್ರತಿಯಾಬ್ಬ ವ್ಯಕ್ತಿ ಮಾತನಾಡುವಂಥ ಮಟ್ಟಕ್ಕೆ ಮುಟ್ಟಿದ್ದೇವೆ. criminal justice, ನಲ್ಲಿ ಮಾನ್ಯ ಜಗದೀಶ್ ಶೆಟ್ಟರ್ ವಿಶೇಷವಾಗಿರತಕ್ಕಂಥ ಅನುಭವವಿದ್ದವರು, ವಕೀಲರು; ಎಲ್ಲಿ ನಾವು ಯಾವುದೇ ಪ್ರಸಂಗದಲ್ಲಿ ನೋಡಿದರೂ ಸಹಿತ ಶಿಕ್ಷೆ ಆಗುವುದು ಭಾರೀ ವಿರಳವಾಗಿಬಿಟ್ಟಿದೆ. ಕೆಲವು ಸಂದರ್ಭದಲ್ಲಿ ಯಾರು ತಪ್ಪು ಮಾಡಿರುತ್ತಾನೆ, ಆ ತಪ್ಪು ಮಾಡಿದವನು, ಆ criminal commit, ಮಾಡಿದವನು ನಾನು ಅದನ್ನು ಒಪ್ಪಿತ್ತೇನೆಂದರೂ ಸಹಿತ ಅವಕಾಶಗಳಿದಂತೆ ಇವತ್ತು ಕೋರ್ಟ್‌ಗೆ ಅಡ್ಡಾಡತಕ್ಕಂಥ, ಆ ಕಾರಣಕ್ಕಾಗಿ pendency, ಸಹಿತ ಬಹಳ ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗತಕ್ಕಂಥದ್ದನ್ನು ನಾವು ಗಮನಿಸುತ್ತಿದ್ದೇವೆ. ಆ ಹಿನ್ನೆಲೆಯೊಳಗೆ ಇವತ್ತು ಈ ಶಿಕ್ಷೆ ಚೌಕಾಸಿ ಹಾಗೂ 436(ಎ)

ಅಮೆಂಡ್‌ಮೆಂಟನ್ನು ಈ ಸಂದರ್ಭದಲ್ಲಿ ತಂದಿದ್ದೇನೆ. ಈ ಮಸೂದೆಯನ್ನು ತಾವು ಪಾಸ್ ಮಾಡಿಕೊಡಬೇಕೆಂದು ಹೇಳಿ ತಮ್ಮಲ್ಲಿ ಕೋರುತ್ತೇನೆ. ಮಾನ್ಯ ಸಚಿವರು ಕ್ರಿಮಿನಲ್ ಪ್ರೊಸಿಜರ್ ಕೋಡ್‌ಗೆ ಹಲವಾರು ತಿದ್ದುಪಡಿಗಳನ್ನು ತಂದಿದ್ದಾರೆ. ಅವರ ಮೂಲ ಉದ್ದೇಶ ಆದಷ್ಟು ಬೇಗನೆ ಟ್ರೈಯಲ್ ಆಗಬೇಕು, ಯಾರು ಅಪರಾಧ ಮಾಡಿರುತ್ತಾರೆ ಆ ಅಪರಾಧಿಗಳಿಗೆ ಶಿಕ್ಷೆಯಾಗಬೇಕು, ಮಾನ್ಯ ಸಚಿವರು ಹೇಳಿದ ಪ್ರಕಾರ ಇವತ್ತಿನ ಪರಿಸ್ಥಿತಿ ಹಾಗೆ ಇದೆ. ಇವತ್ತು ಬಹಳಷ್ಟು ಕ್ರಿಮಿನಲ್ ಕೇಸ್‌ಗಳನ್ನು ಕಂಡಕ್ಟ್ ಆಗುವುದನ್ನು ಅವರು ವರ್ಷಗಟ್ಟಲೆ ಅಡ್ಡಾಡುವುದನ್ನು ನೋಡುತ್ತೇವೆ. ಆ ಅಪರಾಧಿಗಳು ಕೋರ್ಟಿಗೆ 3 ವರ್ಷ 5 ವರ್ಷ, ಹೀಗೆ ಟ್ರೈಯಲ್‌ನಲ್ಲಿ ಅವರು ಅಲೆದಾಡುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಪರಿಸ್ಥಿತಿ ಹೇಗೆ ಇದೆ ಎಂದರೆ ಯಾರು ಅಪರಾಧಿಗಳು ಇರುತ್ತಾರೆ ಅವರು ಕ್ರಿಮಿನಲ್ ಕೋರ್ಟ್‌ಗೆ 34 ವರ್ಷ ಅಡ್ಡಾಡಿದರೆ ಅದೇ ಅವರಿಗೆ ಶಿಕ್ಷೆ ಎನ್ನುವಂಥ ರೀತಿಯಲ್ಲಿ ವ್ಯವಸ್ಥೆಯಾಗಿದೆ. ಅವರು ಆ ರೀತಿಯಾಗಿ ಅಡ್ಡಾಡಿ ಮಾನಸಿಕವಾಗಿ, ತೊಂದರೆಗೀಡಾಗುತ್ತಾರೆ. ಎಕೆಂದರೆ ನಾನು ಏಕೆ ಈ ಮಾತು ಹೇಳುತ್ತೇನೆಂದರೆ, ಇವತ್ತು ನಿಜವಾದಂಥ ಆರೋಪಿಗಳು ಯಾರು ಇದ್ದಾರೆ, ಅಪರಾಧಿಗಳು ಯಾರು ಇದ್ದಾರೆ ಅವರಿಗೆ ಶಿಕ್ಷೆಯಾಗಬೇಕೆನ್ನುವುದು ಒಂದು ಕಡೆ. ಆದರೆ ಎಷ್ಟೋ ಜನ ನಿರಪರಾಧಿಗಳು ಇರುತ್ತಾರೆ. ಫಾಲ್ಸ್ ಕೇಸಸ್ ಫೈಲ್ ಆಗಿರುತ್ತವೆ. ಅವರು ನಾಲ್ಕೈದು ವರ್ಷ ಅಡ್ಡಾಡಿದರೆ ಅವರ ಮಾನಸಿಕ ಸ್ಥಿತಿ ಏನಾಗಬಹುದೆಂದು ನಾವು ವಿಚಾರ ಮಾಡಬೇಕಾಗಿದೆ. ಹೀಗಾಗಿ ಈ ಒಂದು ವ್ಯವಸ್ಥೆಯಲ್ಲಿ ಅಮೂಲಾಗ್ರವಾದ ಬದಲಾವಣೆಗಳನ್ನು ತರಬೇಕಾಗಿದೆ. ಇವತ್ತೇನು ಮಾನ್ಯ ಸಚಿವರು ಮಂಡನೆ ಮಾಡಿದ್ದಾರೆ, ಅದರಲ್ಲಿ ಕೆಲವೊಂದು ಅಂಶವನ್ನು ಮಾತ್ರ ಅವರು ಮಾಡಿದ್ದಾರೆ. ಇನ್ನು ಇದರ ಬಗ್ಗೆ ಅಮೂಲಾಗ್ರವಾದ ಸುಧಾರಣೆ ಇದರಲ್ಲಿ ಆಗಬೇಕಾಗಿದೆ. ಆ ಒಂದು ಟ್ರೈಯಲ್ ವ್ಯವಸ್ಥೆ ಆಮೇಲೆ ಸಾಕ್ಷಿಗಳ ವ್ಯವಸ್ಥೆ, ಒಬ್ಬ ಸಾಕ್ಷಿ ಬಂದ ದಿವಸವೇ ಅವತ್ತಿನ ಟ್ರೈಯಲ್ ಮುಗಿಸಿ ಅವನ ಎವಿಡೆನ್ಸ್ ತೆಗೆದುಕೊಂಡು ಅವನನ್ನು ಕಳುಹಿಸಿಬಿಟ್ಟರೆ ಮುಗಿದು ಹೋಯಿತು. ಆದರೆ ಇವತ್ತು ಕೋರ್ಟಿನಲ್ಲಿ ಹತ್ತಾರು ಸಲ ಅಡ್ಡಾಡುವಂಥ ಪರಿಸ್ಥಿತಿ ಇದೆ. ಏಕೆಂದರೆ, ಒಂದು ದಿವಸಕ್ಕೆ ನೂರಾರು ಕೇಸ್‌ಗಳು ಇರುತ್ತವೆ, ಅವನ ಪಾಳಿ ಹತ್ತುವುದಿಲ್ಲ, ಮತ್ತೆ ನೆಕ್ಸ್ಟ್ ಅಡ್ಜರ್ನ್‌ಮೆಂಟ್‌ಗೆ ಬರಬೇಕು. ಹೀಗಾಗುವುದರಿಂದ ಆ ಸಾಕ್ಷಿಯಲ್ಲಿ ಎಲ್ಲಿಯವರೆಗೆ ಎಂದರೆ ಮೂಲ ಭೂತವಾಗಿ ಹೇಳಿಕೆ ಕೊಟ್ಟಿರುತ್ತಾನೆ, ಆ ಹೇಳಿಕೆ ಅವನಿಗೆ ನೆನಪು ಇರುವುದಿಲ್ಲ, ಟ್ರೈಯಲ್ ಎರಡು ಮೂರು ವರ್ಷದ ನಂತರ ಬಂದಾಗ ಆ ಸಾಕ್ಷಿ ಹೇಳುವಂಥ ಹೇಳಿಕೆಗಳು ಸಂಪೂರ್ಣವಾಗಿ ವ್ಯತಿರಿಕ್ತ ಇರುತ್ತವೆ. ಹೀಗಾಗಿ ಡೆಫ್‌ನೆಟ್ಲಿ ಆ ಪ್ರಾಸಿಕ್ಯೂಷನ್, ಆ ಒಂದು ಆರೋಪವನ್ನು ಸಾಬೀತು ಮಾಡಲಿಕ್ಕೆ ವಿಫಲವಾಗುತ್ತದೆ. ಇದಕ್ಕೆ ಕಾರಣ ಏನೆಂದರೆ ಲಾಂಗರೆನ್ ಬಹಳ ವರ್ಷಗಳವರೆಗೆ ಟ್ರೈಯಲ್ ಆಗುವುದರಿಂದ ಇವತ್ತು ನಾವು ಈ ಪರಿಸ್ಥಿತಿಯನ್ನು ಎದುರಿಸುತ್ತೇವೆ. ಇವತ್ತು ಇದರಲ್ಲಿ ಮಾನ್ಯ ಸಚಿವರು ಹೇಳಿದ ಹಾಗೆ ಒಂದು ನಿಜಾಂಶ ಇದೆ. ಇಡೀ ಕ್ರಿಮಿನಲ್ ನ್ಯಾಯಾಲಯಗಳಲ್ಲಿ ನಡೆಯತಕ್ಕಂಥ ಕ್ರಿಮಿನಲ್ ಕೇಸ್‌ಗಳನ್ನು ಅವಲೋಕನ ಮಾಡಿ ನೋಡಿದರೆ ಬಹುಶಃ ಶೇಕಡ 5ರಷ್ಟು ಕೇಸ್‌ನಲ್ಲಿ ನಾವಿ ಶಿಕ್ಷೆ, ದಂಡನೆಯನ್ನು ಕೊಡಲಿಕ್ಕೆ ಆಗಲಿಲ್ಲ. ಹಾಗಾದರೆ ಇವತ್ತು ಕೆಲವು ನಿರಪರಾಧಿಗಳು ಹೊರಗೆ ಬಂದರೆ ಅಡ್ಡಿಯಿಲ್ಲ, ಆದರೆ ನಿಜವಾದಂಥ ಆರೋಪಿಗಳು ಯಾರು ಇದ್ದಾರೆ, ಅಪರಾಧ

ಮಾಡಿರುವಂಥವರು ಯಾರು ಇದ್ದಾರೆ, ಅಂಥವರು ಇವತ್ತು ಬಹಳಷ್ಟು ಜನ ಹೊರಗೆ ಬಂದಿದ್ದಾರೆ, ಅವರಿಗೆ ಪ್ರೂವ್ ಮಾಡಲಿಕ್ಕೆ ಆಗಲಿಲ್ಲ, ಸರಿಯಾದಂಥ ಸಾಕ್ಷಿ ಆಗಲಿಲ್ಲ, ಹೀಗಾಗಿ ಇವತ್ತು ಅವರು ಅಪರಾಧದಿಂದ ಪಾರಾಗಿ ಬರುವಂತದ್ದನ್ನು ನೋಡುತ್ತಿದ್ದೇವೆ ಹೀಗಾಗಿ ಒಂದು ಹಂತದಲ್ಲಿ ಆ ಕೋರ್ಟ್‌ಗಳ ಬಗ್ಗೆ ಪೋಲೀಸ್ ಹಾಕುವ ಕೇಸ್‌ಗಳ ಬಗ್ಗೆ ಯಾರು ನಿಜವಾದಂಥ ಅಪರಾಧಿಗಳ ಸ್ಥಾನದಲ್ಲಿರುತ್ತಾರೆ ಅವರಿಗೆ ಯಾವುದೇ ಹೆದರಿಕೆ ಇರುವುದಿಲ್ಲ, ಈ ವ್ಯವಸ್ಥೆಯ ಬಗ್ಗೆ ಹದರಿಕೆ ಇಲ್ಲದಿರುವ ಪರಿಸ್ಥಿತಿ ನಿರ್ಮಾಣವಾಗತ್ತಿದೆ. ಇವತ್ತು ನಾನು ಸರ್ಕಾರಕ್ಕೆ ಮತ್ತು ನ್ಯಾಯಾಂಗದ ವ್ಯವಸ್ಥೆಗೆ ಆಗ್ರಹಪಡಿಸುವುದು ಒಂದೇ ಒಂದು ಇವತ್ತು ನೀವು ಯಾರ ಮೇಲೆ ಕೇಸ್ ಹಾಕಿದರೆ, ವಿತ್ ಇನ್ ಒನ್ ಇಯರ್, ನೀವು ಟೈಂ ಬಾಂಡ್ ಫಿಕ್ಸ್ ಮಾಡಿ, ವಿತ್ ಇನ್ ಒನ್ ಇಯರ್, ಟು ಇಯರ್, ಅದೆಲ್ಲಾ ಕಂಪ್ಲೀಟ್ ಟ್ರೈಯಲ್ ಆಗಿ ಒಂದು ರೀತಿಯಾದ ಅಂತಿಮವಾದ ತೀರ್ಮ ಬರುವಂಥ ವ್ಯವಸ್ಥೆಯಾಗಬೇಕು. ಎಷ್ಟೋ ಕಡೆ ಪೋಲೀಸ್ ವ್ಯವಸ್ಥೆ ಬಗ್ಗೆ ಹೇಳುವುದಾದರೆ, ನಾನು ಇಲ್ಲಿ ಬಹಳ ಸ್ಟೆಸ್ ಮಾಡುವಂಥಾದ್ದು, ಎಷ್ಟೋ ಕೇಸ್‌ಗಳಲ್ಲಿ ಸಾರ್ವಜನಿಕರಿಗೆ ಏನು ಸಮಸ್ಯೆಯಾಗಿದೆ ಎಂದರೆ, ಸಾರ್ವಜನಿಕರ ಎದುರೇ ಒಬ್ಬ ವ್ಯಕ್ತಿ ಸಾವಿರಾರು ಸಂಖ್ಯೆಯಲ್ಲಿದ್ದಂತ ಸಾರ್ವಜನಿಕ ಎದುರೆ ಗುನ್ನೆ ಮಾಡುವಂತಹ ಸಂದರ್ಭದಲ್ಲಿ, ಆ ಸಾರ್ವಜನಿಕರು ಯಾರೊಬ್ಬರು ಸಾಕ್ಷಿ ಬಂದು ಹೇಳಲಿಕ್ಕೆ ತಯಾರಿರುವುದಿಲ್ಲ. ಅದಕ್ಕೆ ಕಾರಣ ಏನೆಂದರೆ, ಯಾರು ಸಾಕ್ಷಿ ಹೇಳುವುದಕ್ಕೆ ಬರುತ್ತಾನೆ, ಆತನ ಮೇಲೆ ಪೋಲೀಸ್ ಹೆರ್ಯಾರ್‌ಮೆಂಟ್ ಚಾಲೂ ಆಗುತ್ತದೆ. ಆತ ನೂರೆಂಟು ಸಾರಿ ಕೋರ್ಟಿಗೆ ಬರಬೇಕಾಗುತ್ತದೆ, ನೂರೆಂಟು ಸಾರಿ ಪೋಲೀಸ್ ಸ್ಟೇಷನ್‌ಗೆ ಹೋಗಬೇಕಾಗುತ್ತದೆ. ಹೀಗಾಗಿ ಈ ಉಸಾಬರಿಯೇ ಬೇಡ ಎನ್ನುವ ಭಾವನೆ ಸಾರ್ವಜನಿಕರಲ್ಲಿ ಬಂದಿದೆ. ಈ ಒಂದು ಭಾವನೆಯನ್ನು ತೆಗೆದು ಹಾಕುವಂಥಾ ಕೆಲಸ ಪೋಲೀಸ್ ವ್ಯವಸ್ಥೆ ಮಾಡಬೇಕಾಗಿದೆ. ಇಲ್ಲದಿದ್ದರೆ, ಇವತ್ತೇನು ಆಗಿದೆ ಎಂದರೆ, ನಾನು ಒಬ್ಬ ನ್ಯಾಯವಾಧಿಯಾಗಿ ನನ್ನ ಅನುಭವಕ್ಕೂ ಬಂದಿರುವುದು, ಬಹಳಷ್ಟು ಸಾಕ್ಷಿಗಳು ಈ ಕ್ರಿಮಿನಲ್ ಕೇಸ್‌ನಲ್ಲಿ ಟ್ರೈನ್ ಮಾಡಿದಂಥವರು ಇರುತ್ತಾರೆ, ನಿಜವಾಗಿ ಆ ಒಂದು ಅಪರಾಧ ನಡೆದಂಥ ಸ್ಥಳದಲ್ಲಿ ಇಲ್ಲದೇ ಇರುವಂಥ ವ್ಯಕ್ತಿಗಳು, ಇವತ್ತು ನಾವು ಅಲ್ಲಿ ಇದ್ದೆವು, ಅನ್ನುವಂಥ ರೀತಿಯಲ್ಲಿ ಅವರ ಕಡೆಯಿಂದ ಹೇಳಿಕೆ ಪಡೆದುಕೊಂಡು, ಯಾರು ಪೋಲೀಸ್‌ನವರಿಗೆ, ಯಾರು ಅವರ ಪರವಾಗಿರುವಂಥ ವ್ಯಕ್ತಿಗಳು ಇರುತ್ತಾರೆ, ಅಂಥವರನ್ನು ಹಿಡಿದುಕೊಂಡು, ಅಂದರೆ ಬೇನಾಮಿ ವ್ಯಕ್ತಿಗಳನ್ನು ಸಾಕ್ಷಿದಾರರನ್ನಾಗಿ ಮಾಡುವಂಥ ಪರಿಸ್ಥಿತಿ ಇವತ್ತಿನ ವ್ಯವಸ್ಥೆಯಲ್ಲಿದೆ. ಇದಕ್ಕೇನು ಕಾರಣ ಎಂದರೆ ಸಾರ್ವಜನಿಕರು ಒಂದು ಅನಾಸ್ಥೆ. ಈ ಒಂದು ವ್ಯವಸ್ಥೆಯ ಬಗ್ಗೆ ಅನಾಸ್ಥೆಯಿದ್ದರಿಂದ ಯಾರೋ ಒಬ್ಬ ಸಾಕ್ಷಿದಾರರನ್ನು ಕರೆದುಕೊಂಡು ಬಂದು ಸಾಕ್ಷಿ ಹೇಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಇದನ್ನು ದೂರ ಮಾಡಲಿಕ್ಕೆ ಪೋಲೀಸ್ ವ್ಯವಸ್ಥೆಯನ್ನು ಸರಿ ಮಾಡಬೇಕಾಗಿದೆ. ಟ್ರೈಯಲ್ಸ್ ಬಹಳ ಚುರುಕು ಮುಟ್ಟಿಸುವಂಥಾದ್ದು, ವಿತ್ ಇನ್ ಟೈಂ ಬೌಂಡ್ ನೊಳಗೆ ಮುಗಿಸುವ ಕೆಲಸ ಆಗಬೇಕಾಗಿದೆ. ಹೀಗಾದಾಗ ಮಾತ್ರ ನಿಜವಾದಂಥ ಅಪರಾಧ ಯಾರು ಮಾಡಿರುತ್ತಾರೆ, ಅವರಿಗೆ ಶಿಕ್ಷೆಯಾಗಲಿಕ್ಕೆ ಸಾಧ್ಯವಿದೆ. ಆ ದಿಶೆಯಲ್ಲಿ ಏನೊಂದು ಮೊದಲ ಹೆಜ್ಜೆಯಾಗಿ ಪ್ರಯತ್ನ ಏನು ನಡೆಯುತ್ತಿದೆ. ಇನ್ನು ಅಮೂಲಾಗ್ರವಾ ದಂಥ ಬದಲಾವಣೆಗಳನ್ನು

ಕ್ರಿಮಿನಲ್ ಪ್ರೋಸಿಜರ್ ಕೋಡ್‌ನಲ್ಲಿ ತರಬೇಕಾಗಿದೆ. ಇವತ್ತಿನನ ವ್ಯವಸ್ಥೆಯಲ್ಲಿ ಎನಾಗಿದೆ ಎಂದರೆ, ನಮ್ಮ ದೇಶದಲ್ಲಿ ಕ್ರಿಮಿನಲ್ ಪ್ರೋಸಿಜರ್ ಕೋಡ್ ಇರಬಹುದು, ಇಂಡಿಯನ್ ಪೀನಲ್ ಕೋಡ್ ಇರಬಹುದು, ಇನ್ನಿತರ ಹಲವಾರು ಕಾನೂನುಗಳು, ಬ್ರಿಟಷರು ಏನು ನಮ್ಮ ದೇಶವನ್ನು ಆಳ್ವಿಕೆ ಮಾಡುತ್ತಿದ್ದರು, ಹಾಗೆ ಆಡಳಿತ ಮಾಡುತ್ತಿದ್ದಂಥ ಸಂದರ್ಭದಲ್ಲಿ ಮಾಡಿದಂಥ ಕಾನೂನುಗಳನ್ನೇ ನಾವು ಇವತ್ತಿನವರೆಗೂ ಅನುಕರಣೆ ಮಾಡುತ್ತಿದ್ದೇವೆ.ಈ ಕ್ರಿಮಿನಲ್ ಪ್ರೋಸಿಜರ್ ಕೋಡ್ ಇಂಡಿಯನ್ ಪೀನಲ್ ಕೋಡ್, ಸಿವಿಲ್ ಪ್ರೋಸಿಜರ್ ಇವೆಲ್ಲಾ ಬ್ರಿಟಿಷರು ಅವರು ತಮ್ಮ ಅಡಳಿತದಲ್ಲಿ ಮಾಡಿದಂಥ ವ್ಯವಸ್ಥೆ. ಅದೇ ಕಾನೂನುಗಳನ್ನೇ ಅಲ್ಪ ಸ್ವಲ್ಪ ಬದಲಾವಣೆ ಮಾಡಿ ತಿದ್ದುಪಡಿಗಳನ್ನು ಮಾಡಿ ಇವತ್ತಿನವರೆವಿಗೂ ನಾವು ಅವುಗಳನ್ನೇ ಮುಂದುವರಿಸಿಕೊಂಡು ಬರುತ್ತಿದ್ದೇವೆ. ಅವತ್ತಿನ ದೇಶದ ಪರಿಸ್ಥಿತಿ ಏನಿತ್ತು, ಅವತ್ತಿನ ನಮ್ಮ ಕಲ್ಚರ್ ಎನು, ನಾವು ಹಿಂದೆ ನೋಡುತ್ತಿದ್ದೇವೆ, ನೂರಾರು ವರ್ಷಗಳ ಹಿಂದೆ ಸಾವಿರಾರು ವರ್ಷಗಳ ಹಿಂದೆ, ನಾವು ನೋಡಿದ ಹಾಗೆ ನಮ್ಮಲ್ಲಿ ಒಂದು ವ್ಯವಸ್ಥೆ ಇದೆ, ಪಂಚಾಯಿತಿ ಕಟ್ಟೆ, ಯಾವುದೇ ಒಂದು ಗ್ರಾಮದಲ್ಲಿ ಅಲ್ಲಿದಂಥಹ ಹಿರಿಯರು ಪಂಚರು ಅಲ್ಲಿ ಕುಳಿತು ಹಲವಾರು ಪ್ರಕರಣಗಳನ್ನು ರಾಜಿ ಮಾಡಿ ಅಥಾವ ಅಲ್ಲಿ ಒಂದು ತೀರ್ಮ ಕೊಟ್ಟು ಮಾಡುತ್ತಿದ್ದರು. ಆ ವ್ಯವಸ್ಥೆ ಈಗ ಹೋಗಿಬಿಟ್ಟಿದೆ. ಇವತ್ತು ಯಾವುದೇ ಒಂದು ಗ್ರಾಮದಲ್ಲಿ ಹಿರಿಯರ ಮಾತನ್ನು ಯಾರರು ಕೇಳದಿರುವಂಥ ಪರಿಸ್ಥಿತಿ ಆಗದೆ ಏಕೆಂದರೆ, ಆ ಹಿರಿಯರ ಬಗ್ಗೆನೂ ನಂಬಿಕೆಯಿಲ್ಲ. ಹೀಗಾಗಿ ಈ ವ್ಯವಸ್ಥೆ ಪೂರ್ತಿಯಾಗಿ ಹದಗೆಟ್ಟಿದೆ. ಹೀಗಾಗಿ, ನಾವು ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಅವರು ಒಂದಿಷ್ಟು ತಿದ್ದುಪಡಿಗಳನ್ನು ತಂದಿದ್ದಾರೆ. ಜಸ್ಟೀಸ್ ಮಳೀಮಠ್ ರವರು ಏನೊಂದು ವರದಿ ಕೊಟ್ಟಿದ್ದಾರೆ, ಅದರ ಆಧಾರದ ಮೇಲೆಯೇ ಈ ಒಂದು ಚಿಂತನೆ ನಡೆಯುತ್ತಿದೆ. ಇನ್ನಷ್ಟು ಬದಲಾವಣೆಗಳನ್ನು ತರಬೇಕಾಗಿದೆ, ನಿಜವಾಗಿಯೂ ನನ್ನ ಅಭಿಪ್ರಾಯದ ಪ್ರಕಾರ ಇವತ್ತು ಸಮಗ್ರವಾಗಿ ಆ ಕಾನೂನು ತೆಗೆದು ನಮ್ಮ ದೇಶಕ್ಕೆ ಅನುಕೂಲ ಆಗುವಂಥ, ನಮ್ಮ ಆಡಳಿತಕ್ಕೆ ಅನುಕೂಲ ಆಗುವಂಥ, ನಮ್ಮ ಇಲ್ಲಿಯ ಕೋರ್ಟ್‌ಗಳ ಟ್ರೈಯಲ್‌ಗಳಿಗೆ ಅನುಕೂಲವಾಗುವಂಥ ಆ ರೀತಿಯಾದ ಹೊಸದಾದ ಕಾನೂನುಗಳನ್ನು ರಚನೆ ಮಾಡುವಂಥದ್ದು, ಇದು ಇಡೀ ದೇಶದಲ್ಲಿ ಪಾರ್ಲಿಮೆಂಟ್‌ನಲ್ಲಿ ಕೂಡ ಇದರ ಬಗ್ಗೆ ಚಿಂತನೆ ಆಗಬೇಕು, ಅಂದಾಗ ಮಾತ್ರ ನಮ್ಮ ವ್ಯವಸ್ಥೆಗೆ ಈ ಒಂದು ಟ್ರೈಯಲ್ ಅಥಾವ ಸಾಕ್ಷಿಗಳ ಅಥಾವ ಎಲ್ಲಾ ಕ್ರಿಮಿನಲ್ ಕೇಸ್‌ಗಳು ಇರಬಹುದು, ಇನ್ನಿತರ ದಿವಾಳಿ ಸ್ವರೂಪದ ಕೇಸ್‌ಗಳು ಇರಬಹುದು, ಅವು ತೀವ್ರಗತಿಯಲ್ಲಿ ತೀರ್ಮ ಬರುವುದಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದೇನೆ. ಅದಕ್ಕಾಗಿ ಇದರಲ್ಲಿ ಇನ್ನೊಂದಿಷ್ಟು ಅಮೂಲಾಗ್ರ ಬದಲಾವಣೆ ತರಬೇಕು, ಇವತ್ತೇನು ತೆಗೆದುಕೊಂಡು ಬಂದಿದ್ದಾರೆ ನಾವು ಇದನ್ನು ಸ್ವಾಗತ ಮಾಡುತ್ತೇವೆ, ಬರುವಂಥ ದಿವಸಗಳಲ್ಲಿ ಇನ್ನು ಹೆಚ್ಚಿನ ಚಿಂತನೆ ಇದರ ಬಗ್ಗೆ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಈ ಬಿಲ್ ಅನ್ನು ನಾನೂ ಕೂಡ ಸ್ವಾಗತಿಸುತ್ತೇನೆ. ಒಂದು ಒಳ್ಳೆಯ ನಡಿಗೆಯನ್ನು ಮನ್ಯ ಕಾನೂನು ಸಚಿವರು ಆರಂಭ ಮಾಡಿದ್ದಾರೆ. ಅನಾವಶ್ಯಕವಾಗಿ ವಿಳಂಬವಾಗುತ್ತಿದ್ದ ಕಡೆ

ರಾಜಿ ಮಾಡಿಕೊಂಡು ಅಥವಾ ಬಾರ್ಗೇನ್ ಮಾಡಿಕೊಂಡು ಶಿಕ್ಷೆ ಕಡಿಮೆ ಮಾಡಿಕೊಳ್ಳುವುದು, ಅಥವಾ ನಷ್ಟ ಆದವರಿಗೆ ಪರಿಹಾರ ಕೊಡುವುದು, ನಿಜವಾಗಿ ಬಹಳ ಹಿಂದೇಯೇ ಕ್ರಿಮಿನಲ್ ಪ್ರೊಸಿಜರ್ ಕೋಡ್‌ನಲ್ಲಿ ಬರಬೇಕಾಗಿತ್ತು. ನಾವು ಎನಾದರೂ ನಷ್ಟವಾದರೆ ಕೇಸ್ ಹಾಕಿ ಅವನಿಗೆ ಪನಿಷ್‌ಮೆಂಟ್ ಕೊಡಿಸಬಹುದು, ಇಷ್ಟು ಬಿಟ್ಟರೆ ನಮ್ಮ ನಷ್ಟವನ್ನು ಎನು ಮಾಡಬೇಕೆಂದು ಎಲ್ಲಿಯೂ ನಮಗೆ ಉಲ್ಲೇಖ ಇರಲಿಲ್ಲ. ಈ ಬಿಲ್ ನಿಜವಾಗಿಯೂ ಸ್ವಾಗತಾರ್ಹ ಒಂದೇ ಒಂದು ಮಾತು ನಾನು ಹೇಳುವುದಕ್ಕೆ ಬಯಸುತ್ತೇನೆ. ಯಾರು ಇಂಥ ಕನ್ಸೇಷನ್ ಅನ್ನು ತೆಗೆದು ಕೊಂಡಿರುತ್ತಾರೆ. ಪರ್ಪೆಚ್ಯುಯಲ್ ಅಫೆಂಡರ್ಸ್ ಆದರೆ ಇದನ್ನೂ ಸೇರಿಸಿ ಶಿಕ್ಷೆ ಮಾಡುತ್ತೇವೆಂದು ಹೇಳಬೇಕಾಗುತ್ತದೆ. ಈಗ ನಾನು ಅರ್ಧ ಟರ್ಮ್ ಅನ್ನು ಕನ್ಸೆಷನ್ ತೆಗೆದುಕೊಂಡಿದ್ದರೆ ಇನ್ನೊಂದು ಅಪರಾಧವನ್ನು ನಾನು ಮಾಡುತ್ತೇನೆಂದರೆ ಇದನ್ನೂ ಸೇರಿಸಿ ಶಿಕ್ಷೆ ಅನುಭವಿಸಬೇಕಾಗುತ್ತದೆನ್ನುವ ಸ್ಥಿತಿ ಅವನಿಗೆ ಗೊತ್ತಿರಬೇಕು. ಈ ತರಹ ಕ್ರೈಮ್ ಮಾಡುವುದು, ರಾಜಿ ಮಾಡಿಕೊಳ್ಳುವುದು ಮತ್ತೆ ಮಾಡುವುದು, ಇಂಥವರಿಗೆ ಈ ಕಾಯಿದೆ ಕೆಳಗಡೆ ಈ ರಕ್ಷಣೆ ಅವರಿಗೆ ಸಿಗಬಾರದು, ಇದು ಅವರಿಗೆ ಸದರ ಆಗಿಬಿಡುತ್ತದೆ. ಒಂದು ಕಡೆ ನಾವು ಶಿಕ್ಷೆ ಕಡಿಮೆ ಮಾಡುತ್ತೇವೆಂದರೂ ಇನ್ನೊಂದು ಕಡೆ ಶಿಕ್ಷೆ ಆಗಲೇಬೇಕಾಗಿದೆ, ಭೀತಿ ಇರುವ ವಾತಾವರಣ ಇರಲೇಬೇಕಾಗುತ್ತದೆ, ನಾನು ಮಾಡಬಾರದ್ದು ಮಾಡಿದರೆ ಆಗಬಾರದ್ದು ಆಗುತ್ತದೆ ಎನ್ನುವ ಭಾವನೆ ಇರಬೇಕಾಗುತ್ತದೆ. ಅವನು ಯಾರಾದರೂ ಇಂಟೆನ್ಶೆಯಲ್ ಅಫೆಂಡರ್ ಇದ್ದರೆ ಮತ್ತೆ ಅವನು ಮಾಡೇ ಮಾಡುತ್ತಾನೆ, ಎರಡನೇ ಸಲ ಅವನೇನಾದರೂ ಶಿಕ್ಷೆಗೆ ಒಳಗಾಗಬೇಕಾದರೆ ಅವನಿಗೆ ಈ ಸೆಂಟೆನ್ಸ್‌ನ್ನೂ ಸೇರಿಸಿ ಶಿಕ್ಷೆಗೆ ಒಳಪಡಿಸುತ್ತೇವೆಂದು ಹೇಳುವಂಥಾ ತೀರ್ಮಾನವನ್ನು ತರಬೇಕಾಗುತ್ತದೆ. ಪೆರೋಲ್ ಕೊಡುವುದರ ಬಗ್ಗೆನೂ ಕೂಡ ತಾವು ಪರಿಶೀಲನೆ ಮಾಡಬೇಕಾಗುತ್ತದೆ. ಈ ಪೆರೋಲ್ ಏನು ಕೊಡುತ್ತಿದ್ದೀರಿ, ಯಾವಾಗ ಬೇಕೊ ಅನಾವಶ್ಯಕವಾಗಿ ಪೆರೋಲ್ ತೆಗೆದುಕೊಳ್ಳುವುದು, ಕೊನೆಯಲ್ಲಿ ನಾನು ಜೈಲ್‌ನಲ್ಲಿರುತ್ತೇನೆ, ಅಥವಾ ಆ ಸೆಂಟೆನ್ಸ್‌ನ್ನು ಕಂಪ್ಲೀಟ್ ಮಾಡುತ್ತೇವೆಂದು ಹೇಳುತ್ತಾರೆ; ಯಾವ ಕಾರಣಕ್ಕಾಗಿ ಪೆರೋಲ್ ತೆಗೆದುಕೊಂಡು ಬರುತ್ತಾರೆಂಬುದನ್ನು ತಾವು ಸ್ವಲ್ಪ ದೀರ್ಘವಾಗಿ ಯೋಚನೆ ಮಾಡಬೇಕು, ಇದರಲ್ಲಿ ಇನ್ನೊಂದು ಸೇರಿಸಬೇಕು. ನಾವೇನು ಸಾರ್ವಜನಿಕರ ಪರವಾಗಿ ಹೋರಾಟಗಳನ್ನು ಮಾಡುತ್ತೇವೆ, ಅದರಲ್ಲಿ ನ್ಯೂಸೆನ್ಸ್ ಕೇಸ್ ಹಾಕುತ್ತಾರೆ, ಲಾರಿ ನಿಲ್ಲಿಸಿದ್ದೇವೆಂದು ಹಾಕುತ್ತಾರೆ, ಬಸ್ ನಿಲಿಸ್ಸಿದ್ದೇವೆಂದು ಹಾಕುತ್ತಾರೆ, ರೈಲು ತಡೆದೆವು ಎಂದು ಹಾಕುತ್ತಾರೆ. ಆ ವ್ಯಾಪ್ತಿಯಲ್ಲಿ ಇದರಲ್ಲಿ ತೆಗೆದುಕೊಂಡು ಬಂದು, ಎನಾದರೂ ಮಾಡಿ ಮಾನ್ಯ ಕಾನೂನು ಸಚಿವರು ಆ ಕೇಸ್‌ಗಳು ಇತ್ಯರ್ಥ ಮಾಡಲಿಕ್ಕೆ ಅವಕಾಶ ಮಡಿಕೊಡಬೇಕು. ನಮ್ಮ ಮಾಜಿ ಸಂಸದ್ ಸದಸ್ಯರಾದ ಮನ್ಯ ಬಸವರಾಜ್‌ರವರು ಯಾವತ್ತೋ ಅವರು ನೇತ್ರಾವತಿ ಹೋರಾಟ ಮಾಡಿರುವಂಥದ್ದಕ್ಕೆ ಇವತ್ತು ಗುಬ್ಬಿ ಕೋರ್ಟ್ ಮುಂದೆ ಹೋಗಿ ನಿಂತುಕೊಳ್ಳುತ್ತಿದ್ದಾರೆ. ಹಾಗೆಯೇ ಮಾನ್ಯ ಶಿವನಂಜಪ್ಪನವರೂ ಕೂಡ ಕೋರ್ಟ್‌ಗೆ ಹೋಗಿ ನಿಂತುಕೊಳ್ಳುತ್ತಿದ್ದಾರೆ. ಜಡ್ಜ್‌ಗಳು ನಮ್ಮನ್ನು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಅಲ್ಲಿ ನಿಲ್ಲಿಸಿಕೊಂಡು ಅನಂತರ ಇನ್ನೊಂದು ಡೇಟ್ ಕೊಟ್ಟಿದ್ದೇವೆ ಹೋಗಿ ಎಂದು ಜಡ್ಜ್‌ಗಳು ಹೇಳುತ್ತಾರೆ. ಖಂಡಿತ ಇವೆಲ್ಲವನ್ನೂ ನಾವು ಅನುಭವಿಸಿದ್ದೇವೆ. ನಾವೇನಾದರೂ ಕೆ. ಇ. ಬಿ. ಬಗ್ಗೆ ಸ್ಟ್ರೈಕ್

ಮಾಡಿದರೆ, ಕೋರ್ಟ್‌ನಲ್ಲಿ ಬೆಳಿಗ್ಗೆ ಕೂಗಿಸುತ್ತಾರೆ, ಅನಂತರ ಮಧ್ಯಾಹ್ನ ಬನ್ನಿ ಎಂದು ಹೇಳುತ್ತಾರೆ. ಮತ್ತೆ ಮಧ್ಯಾಹ್ನ ಕೂಗಿಸುತ್ತಾರೆ, ಆ ನಂತರರ ಸಾಯಂಕಾಲ ಬನ್ನಿ ಎಂದು ಹೇಳುತ್ತಾರೆ. ಮತ್ತೆ ನಾವು ಸಾಯಂಕಾಲ ಹೋದರೆ ಮತ್ತೊಂದು ದಿವಸದ ಡೇಟ್ ಕೊಡುತ್ತಾರೆ. ನಾವೇನು ಸಾರ್ವಜನಿಕ ಕೆಲಸ ಮಾಡಿರುತ್ತೇವೆ, ಅದಕ್ಕೆ ಇಷ್ಟೊಂದು ಹಿಯ್ಯಾಳಿಸತಕ್ಕಂಥ ಸ್ಥಿತಿ ಮತ್ತು ಒಬ್ಬ ಜನಪ್ರತಿನಿಧಿಯನ್ನು ಕಟಕಟೆಯ ಮೇಲೆ ನಿಲ್ಲಿಸಿದೆ ಎಂದು ಸ್ಯಾಟಿಸ್ಟಿಕ್ ಪ್ಲೆಕ್ಷರ್ ತೆಗೆದುಕೊಳ್ಳುವಂಥ ಸ್ಥಿತಿ ಜುಡಿಷಿಯಲ್‌ನಲ್ಲಿ ಎನಿದೆ ಇದು ನಮ್ಮ ಕಾಲದಲ್ಲಿ ತಪ್ಪಗಬೇಕಾಗುತ್ತದೆ. ತೀರ ಹೀನವಾದ ಅಫೆನ್ಸ್ ಮಾಡಿದಾಗ ನಮಗೆ ಶಿಕ್ಷೆಯಾಗಲಿ, ನಾವೇನೂ ಬೇಡ ಎಂದು ಹೇಳುವುದಿಲ್ಲ. ಒಂದು ಕಡೆ ಪ್ರೊಟೆಸ್ಟ್ ಮಾಡಿದ್ದಕ್ಕೆ, ಒಂದು ಕಡೆ ಮೈಕ್ ಕೆಟ್ಟಿದ್ದಕ್ಕೆ ಮತ್ತೆ ಒಂದು ಕಡೆ ಅರ್ಧ ಅಥವಾ ಒಂದು ಗಂಟೆ ಬಸ್ ನಿಲ್ಲಿಸಿದ್ದಕ್ಕೆ ಇವತ್ತು ಏನು ಜನಪ್ರತಿನಿಧಿಗಳನ್ನು ಕರೆದುಕೊಂಡು ಹೋಗಿ ಅಲ್ಲಿ ನಿಲ್ಲಿಸುತ್ತಾರೆ. ಹಾಗೆಯೇ ಸ್ಟೂಡೆಂಟ್ ಫೋರಂನಲ್ಲಿ ಗಲಾಟೆ ಮಾಡಿದ್ದಕ್ಕೆ, ಲೇಬರ್‌ಗೆ ಸಂಬಂಧಪಟ್ಟಂತೆ ಕೂಡ ಕನ್ಸೇಷನ್ ಕೊಡತಕ್ಕಂಥದ್ದನ್ನು ತಾವು ಮಾಡಬೇಕು, ಈ ಒಂದು ವ್ಯಾಪ್ತಿಯನ್ನು ಇದರಲ್ಲಿ ತರಬೇಕಾಗುತ್ತದೆ. ಮತ್ತೆ ಈಗ ಇರತಕ್ಕಂಥ ಕೇಸ್‌ಗಳನ್ನು ವಿತ್‌ಡ್ರಾ ಮಾಡಿ. ಆ ಒಂದು ಅಫೆನ್ಸ್‌ಸನ್ನು ಇದರ ಕೆಳಗೆ ತರಬೇಕು. ಇವೆಲ್ಲಾ ಬದುಕಿನಲ್ಲಿ ಇರುವಂಥವೇ, ನೀವು ಈ ಕಡೆ ಬಂದು ಕುಳಿತುಕೊಂಡರೆ ಆ ಕೆಲಸವನ್ನು ನೀವು ಮಾಡಲೇಬೇಕಾಗುತ್ತದೆ. ಮಾಡದೇ ಇದ್ದರೆ, ನೀವು ರಾಜಕೀಯದಲ್ಲಿ ಉಳಿಯುವುದಕ್ಕೆ ಆಗುವುದಿಲ್ಲ. ನಾವು ಈ ಕಡೆ ಇರುವುದರಿಂದ ಆ ಕೆಲಸವನ್ನು ಮಾಡುತ್ತೇವೆ. ಮತ್ತೆ ನಾವು ಅತ್ತ ಕಡೆ ಬಂದಾಗ ನೀವು ಇಲ್ಲಿಗೆ ಬಂದಾಗ ಆ ಕೆಲಸವನ್ನು ಮಾಡಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕ ಹಿತ್ತಾಸಕ್ತಿಗೋಸ್ಕರ ಹೋರಾಟ ಮಾಡುವಂಥವರಿಗೆ ಕನ್ಸೇಷನ್ ಕೊಡತಕ್ಕಂಥದ್ದು ಮತ್ತು ಇಷ್ಟು ದಿವಸಗಳಲ್ಲಿ ವಿಚಾರಣೆಯನ್ನು ಮುಗಿಸಿ ಎಂದು ರೈಡರ್ ಕ್ಲಾಸ್ ಹಾಕತಕ್ಕಂಥದ್ದು ಆಗಬೇಕು. ಇಂಥ ಕೇಸನ್ನು ಕನಿಷ್ಠ ಇಷ್ಟು ದಿವಸಗಳಲ್ಲಿ ಮುಗಿಸಬೇಕೆಂದು ಇರಬೇಕು. ಇದನ್ನು ಸಿ. ಆರ್. ಪಿ. ಸಿ. ಯಲ್ಲಿ ತರುವುದಕ್ಕೆ ಪರಿಶೀಲನೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಈಗ ಏನು ಅವರ ಜೊತೆ ವ್ಯವಹರಿಸುವುದು ಅಥವಾ ಒಡಂಬಡಿಕೆ ಮಾಡಿಕೊಂಡು ರಿಯಾಯಿತಿ ಕೊಡುವುದು ಮತ್ತೆ ಪನಿಷ್‌ಮೆಂಟ್ ಸೆಂಟೆನ್ಸ್‌ನ್ನು ರೆಫರ್ ಮಾಡುವುದು ಅಥವಾ ರೆಡ್ಯೂಸ್ ಮಾಡುವುದನ್ನು ತಾವು ಏನು ಮಾಡಿದ್ದೀರಿ, ಇದು ನಿಜವಾಗಿಯೂ ಕೂಡ ಸ್ವಾಗತಾರ್ಹವಾದುದು ಎಂದು ಹೇಳುತ್ತಾ, ಇದರಿಂದ ಈ ರಾಜ್ಯದಲ್ಲಿ ಬಹಳ ವರ್ಷಗಳಿಂದ ಏನು ಮೊಕದ್ದಮೆಗಳು ಪೆಂಡಿಂಗ್ ಇವೆ. ಇದರ ಬಗ್ಗೆ ಕೂಡ ಇದರಲ್ಲಿ ಸೇರಿಸಬಹುದು. 7, 10, 12 ವರ್ಷಗಳಾದ ಮೇಲೆ ಪಿಟ್ಟಿ ಕೇಸ್‌ಗಳನ್ನು ಟ್ರೈಯಲ್ ಮಾಡತಕ್ಕಂಥದ್ದರಲ್ಲಿ ಏನೂ ಅರ್ಥವಿಲ್ಲವೆಂದು ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸುಪ್ರೀಂ ಕೋರ್ಟ್‌ನ ರೂಲಿಂಗ್ ಕೂಡ ಇದೆ. ಸುಪ್ರೀಂ ಕೋರ್ಟ್ ಹೇಳಿ ಸಾರಸಗಟಾಗಿ ಎಲ್ಲಾ ಕೇಸ್‌ಗಳನ್ನು ವಜಾ ಮಾಡಿಸಿತ್ತು. 6 ತಿಂಗಳ ಸಜಾ ಆಗತಕ್ಕಂಥ ಒಂದು ಆಫೆನ್ಸ್‌ನ್ನು 5,6,7, ವರ್ಷಗಳಾದರೂ ಟ್ರೈಯಲ್ ಮಾಡುತ್ತಾ ಹೋದರೆ, ಅದಕ್ಕೆ ಅರ್ಥ ಎನೂ ಉಳಿಯುವುದಿಲ್ಲ. ಅಂಥವುಗಳನ್ನು ಎನಾದರೂ ಇಂಥ ವ್ಯಾಪ್ತಿಯಲ್ಲಿ ತಂದು treated it as closed ಎಂದು ಅಥವಾ ಏನೊಂದು ಸ್ಥಿತಿಯನ್ನು ನಿರ್ಮಾಣ ಮಾಡಬೇಕು. ಆ ಒಂದು ತಿದ್ದುಪಡಿ

ಕೂಡ ಇದರಲ್ಲಿ ತರಬೇಕು. ನಿಜವಾಗಿ ಇವತ್ತು ತಂದಿರತಕ್ಕಂಥ ಬಿಲ್ ಸ್ವಾಗತಾರ್ಹ ಎಂದು ನಾನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಶಿಕ್ಷೆ ಮತ್ತು ರಾಜಿ ಬಗ್ಗೆ ಹೇಳುವಾದಾದರೆ ಭಯಂಕರವಾದಂಥ ಖೈದಿಗಳು, ಸಮಾಜಘಾತುಕರು, ಇಂಥವರು ಪ್ರತಿಸಾರಿ ತಪ್ಪು ಮಾಡತಕ್ಕಂಥವರ ಬಗ್ಗೆ, ನಾವು ಎಲ್ಲೋ ಒಂದು ಕಡೆ ಸಮಾಜದಲ್ಲಿ ಶಾಂತಿಯನ್ನು ತರಬೇಕಾದರೆ, ಅವರುಗಳ ಬಗ್ಗೆ ನಾವು ಏನು ಕ್ರಮ ಕೈಗೊಳ್ಳಬೇಕೆಂಬುದರ ಬಗ್ಗೆ ಒಂದು ಪ್ರಾಮಾಣಿಕವಾಗಿ ತೀವ್ರವಾದಂಥ ಕ್ರಮ ಇರಬೇಕಾಗುತ್ತೆದೆ. ಇದ್ಯಾವುದೂ ಕ್ರಮ ಇಲ್ಲದೆ, ಎರಡುಮೂರು ವರ್ಷ ಜೈಲಿನಲ್ಲಿ ಇದ್ದಂಥವರನ್ನು ರಾಜಿ ಮೇಲೆ ಬಿಡುಗಡೆ ಮಾಡೋಣ. ಏಕೆಂದರೆ ಅವರು ಬಹಳ ದಿವಸ ಜೈಲಿನಲ್ಲಿದ್ದು ಮತ್ತೇ ಹೋದಾಗ ಅವರಿಗೂ ಮೂರು ವರ್ಷ ಶಿಕ್ಷೆ ಎನ್ನುವ ವಾದ ಹೇಳುವುದಾದರೆ ಅದು ಸರಿಯಾದ ಕ್ರಮವಲ್ಲ. ಅವರು ಹಿಂದೆ ಹೇಗಿದ್ದರು? ಅವರು ಮಾಡಿರತಕ್ಕಂಥ ಅಪರಾಧ ಏನು? ಅವರು ಮಾಡಿರತಕ್ಕಂಥ ಅಪರಾಧದ ಮೇಲೆ ನೀವು ಏನೇ ರಾಜಿ ಮಾಡಬಹುದು. ಆತ ಯಾವರೀತಿಯಾದ ಅಪರಾಧ ಮಾಡಿದ್ದಾನೆ ಎನ್ನತಕ್ಕಂಥದರ ಬಗ್ಗೆ ನೀವು ಚಿಂತನೆ ಮಾಡಬೇಕು. ರಾಜಿ ಮಾಡಬೇಕಾದರೂ ಕೂಡ ಎಲ್ಲೋ ಒಂದು ಕಡೆ ವಿನಾಃಕಾರಣ ಅಪರಾಧಿ ಆಗಿದ್ದಾನೆ ಎನ್ನತಕ್ಕಂಥ ಪ್ರಶ್ನೆ ಬಂದಾಗ ನೀವು ಮಾಡಬಹುದೇ ಹೊರತು, ನಿಜವಾಗಿಯೂ ಆತ ಪ್ರತಿಸಲ ಅಪರಾಧ ಮಾಡುತ್ತಿದ್ದು, ಸಮಾಜಕಂಠಕನಾಗಿದ್ದು, ಸಮಾಜಕ್ಕೆ ಭಯೋತ್ಪಾದಕ ಆಗಿರತಕ್ಕಂಥ ಇಂತಹ ವ್ಯಕ್ತಿಯನ್ನು ಯಾವುದೇ ಕಾರಣಕ್ಕೂ ಜೈಲಿನಿಂದ ಬಿಡದೇ ಇರತಕ್ಕಂಥ ವ್ಯವಸ್ಥೆ ಮಾಡಬೇಕು. ಮತ್ತೆ ಈಗ ಇರತಕ್ಕಂಥ ಪೋಲೀಸ್ ಕಾಯಿದೆ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಇಲ್ಲಿ ಹೇಳಿರತಕ್ಕಂಥದ್ದನ್ನು ನಾನು ಸಮರ್ಥನೆ ಮಾಡುತ್ತೇನೆ. ಯಾವುದೋ ಕಾಲದ ಪೋಲೀಸ್ ಕಾಯಿದೆ ಇವತ್ತಿನ ದಿವಸ ಸಮಗ್ರವಾಗಿ ಬದಲಾವಣೆಯಾಗಬೇಕು. ಬ್ರಿಟಿಷ್ ಕಾಲದ ಪೋಲೀಸ್ ಕಾಯಿದೆ ಸಮಗ್ರವಾಗಿ ಬದಲಾವಣೆಯಾಗಬೇಕು ಮತ್ತು ಸಾಧ್ಯವಾದರೆ ಲೋಕಸಭೆಯಲ್ಲಿಯೂ ಕೂಡ ಬದಲಾವಣೆ ಆಗಬೇಕಾಗುತ್ತದೆ. ಇದಕ್ಕೆ ಅಲ್ಲಿಯೂ ಕೂಡ ನಾವು ಒತ್ತಡ ತರಬೇಕಾಗುತ್ತದೆ. ಈಗ ಹಳೆಕಾಲದ ಕಾಯಿದೆಗಳು ಇವತ್ತು ಇವೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಮೊಕದ್ದಮೆ ಬಗ್ಗೆ ಹೇಳುವುದಾದರೆ, ಯಾರೊಬ್ಬನಿಗೆ ಮಧುಮೇಹ ಕಾಯಿಲೆ ಇರುತ್ತದೆ. ತಕ್ಷಣ ಆತ ಮೂತ್ರ ವಿಸರ್ಜನೆಯನ್ನು ಮಾಡಬೇಕು ಸಾರ್ವಜನಿಕ ಸ್ಥಳದಲ್ಲಿ ಮಾಡಬೇಕಾಗುತ್ತದೆ. ಆದರೆ, ಅಲ್ಲಿ ಮಾಡುವ ಹಾಗೆ ಇಲ್ಲ. ಒಂದು ವೇಳೆ ಆತ ಮಾಡಿದರೆ ತಕ್ಷಣ ಪೋಲಿಸ್ ಹಿಡಿದುಕೊಂಡು ಹೋಗಿ, ಆತನ ಮೇಲೆ ಕೇಸ್ ಹಾಕಬಹುದು. ಈ ರೀತಿಯಾದ ಸಣ್ಣ ಸಣ್ಣ ಕೇಸ್‌ಗಳನ್ನು ಎಷ್ಟು ಬೇಕಾದರೂ ನಾವು ಹಾಕಬಹುದು. ಇವತ್ತಿನ ದಿವಸ ಇಷ್ಟೂಂದು ಕಾನೂನುಗಳನ್ನು ಪೋಲಿಸರ ಕೈಗೆ ಕೊಟ್ಟಿದ್ದೇವೆ. ಅಂದರೆ, ನಿಂತುಕೊಂಡರೆ, ಕುಳಿತುಕೊಂಡರೆ, ಮೈಕ್‌ನಲ್ಲಿ ಮಾತನಾಡಿದರೆ, ಜೋರಾಗಿ ಕೂಗಿದರೆ, ಕೈ ಎತ್ತಿದರೆ ಅಂದರೆ ಪ್ರತಿ ಹೆಜ್ಜೆ ಹೆಜ್ಜೆಗೂ ಕೇಸ್ ದಾಖಲೆ ಮಾಡುತ್ತಾರೆ. ಇವೆಲ್ಲಾ ಒಳ್ಳೆಯ ಸೂಚನೆಗಳಲ್ಲವೆಂದು ನನಗನಿಸುತ್ತದೆ. ಜೋರಾಗಿ ಮಾತನಾಡುತ್ತಿದ್ದರೆ ಅಪರಾಧವಾಗುತ್ತದೆ. ಮತ್ತೆ ಮೈಕ್ ಜಾಸ್ತಿ ಹಾಕಿದ್ದರಿಂದ ಪಕ್ಕದ ಮನೆಯವರಿಗೆ ಶಬ್ದ ಜಾಸ್ತಿ ಕೇಳುತ್ತದೆ. ಅದಕ್ಕೆ

ಅಪರಾಧವಾಯಿತು. ಈ ರೀತಿಯಾಗಿ ಅಪರಾಧವನ್ನು ಹೊರಿಸುವುದಕ್ಕೆ ಬೇಕಾದಷ್ಟು ಅವಕಾಶಗಳನ್ನು ಕೊಟ್ಟಿದ್ದೇವೆ. ಆದ್ದರಿಂದ ಇವೆಲ್ಲವನ್ನೂ ಸಾರಾಸಗಟಾಗಿ ತೆಗೆಯಬೇಕು, ಮತ್ತೆ ಯಾವುದು ಪ್ರಾಮುಖ್ಯ ಎನ್ನತಕ್ಕಂಥದ್ದನ್ನು ತಾವು ಸಂಪೂರ್ಣವಾದಂಥ ಒಂದು ಪಟ್ಟಿಯನ್ನು ಮಾಡಬೇಕು. ಮತ್ತೆ ಇವುಗಳನ್ನು ಯಾವ ಆಧಾರದಮೇಲೆ ಏನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಚಿಂತನೆ ಮಾಡಬೇಕು. ಈ ಸಂದರ್ಭದಲ್ಲಿ ಬಹಳ ಪ್ರಾಮುಖ್ಯವಾದಂಥ ವಿಚಾರವನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾವು ಈ ವಿಚಾರಗಳ ಬಗ್ಗೆ ಅನೇಕ ಸಲ ಒತ್ತಾಯ ಕೂಡ ಮಾಡುತ್ತಿದ್ದೇವೆ. ರೈತರ ಮೇಲೆ, ಕಾರ್ಮಿಕರು, ವಿದ್ಯಾರ್ಥಿಗಳ ಮತ್ತು ಜನಸಾಮಾನ್ಯರ ಮೇಲೆ ನಡೆದಿರತಕ್ಕಂಥ ಅನೇಕ ಮೊಕದ್ದಮೆಗಳು ವರ್ಷ ವರ್ಷ ಕಳೆದರೂ ಕೂಡ ನ್ಯಾಯಾಲಯಕ್ಕೆ ಹೋಗಿ ಅಲೆಯಬೇಕಾಗಿದೆ ಹೊರತು ಇಡೀ ರಾಜ್ಯದಲ್ಲಿ ರೈತರ ಮೇಲೆ ಎಷ್ಟು ಕೇಸ್‌ಗಳಿವೆ ಮತ್ತು ಚಳುವಳಿಗಾರರ ಮೇಲೆ ಮತ್ತು ಬೇರೆ ಬೇರೆ ಪಕ್ಷದವರ ಮೇಲೆ ಹಾಗೂ ವಿದ್ಯಾರ್ಥಿಗಳ ಮೇಲೆ ಎಷ್ಟು ಮೊಕದ್ದಮೆಗಳಿವೆ ಈ ಎಲ್ಲಾ ಮೊಕದ್ದಮೆಗಳನ್ನು ತಾವು ಸಾರಸಾಗಟಾಗಿ ತರಿಸಿ ಸಂಪೂರ್ಣವಾಗಿ ತಾವು ಇದರ ಬಗ್ಗೆ ತಾವು ಕೂಡಲೇ ಈ ಸದನ ಮುಗಿಯುವುದರೊಳಗೆ, ಸಾಧ್ಯವಾದರೆ ನಾವು ಇವತ್ತು ಉತ್ತರ ಕೊಡುವಾಗ ಹೇಳಿದರೂ ಕೂಡ ನನಗೆ ಸಂತೋಷ ತಾವು ಈ ಎಲ್ಲಾ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದೇವೆ. ಎಂದು ಹೇಳಿದರೆ ನಿಜಕ್ಕೂ ಇಡೀ ರಾಜ್ಯದ ಜನತೆ ಅಭಿನಂದಿಸುತ್ತಾರೆ. ರೈತರು, ವಿದ್ಯಾರ್ಥಿಗಳು ಮತ್ತು ಕಾರ್ಮಿಕರು ಹಾಗೂ ಜನ ಸಾಮಾನ್ಯರು, ರಾಜಕಾರಣಿಗಳು ಯಾವುದಕ್ಕಾಗಿ ಹೋರಾಟ ಮಾಡುತ್ತಾರೆ? ಇವತ್ತು ನನ್ನ ಮೇಲೆ ಸುಮಾರು 25 ರೈಲ್ವೆ ಕೇಸ್‌ಗಳು ಇರಬಹುದು. ನಾವು ಪ್ರತಿವಾರ ಅಲ್ಲಿಗೆ ಹೋಗಬೇಕು ಇಲ್ಲಿಗೆ ಬರಬೇಕು ಆ ರೀತಿಯಾಗಿದೆ. ಈ ರೀತಿಯಾಗಿ ಅನೇಕ ಮೊಕದ್ದಮೆಗಳಿವೆ. ಆದ್ದರಿಂದ, ದಯವಿಟ್ಟು ಈ ಸಂದರ್ಭದಲ್ಲಿ ಉತ್ತರ ಕೊಡುವಾಗ ಇದರ ಬಗ್ಗೆ ಹೇಳಬೇಕು. ಮತ್ತೆ ಈ ಒಂದು ಬದ್ಧತೆಯ ಬಗ್ಗೆ ಸಚಿವಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಮತ್ತೆ ಅನೇಕ ಸಲ ಸದನದಲ್ಲಿಯೂ ಕೂಡ ಹೇಳಿದ್ದೀರಿ. ರೈತರ ಮೇಲೆ ಇರತಕ್ಕಂಥ ಮೊಕದ್ದಮ್ಮೆಗಳನ್ನು ತೆಗೆಯುತ್ತೇವೆಂದು ಹೇಳಿದ್ದೀರಿ. ಹಾಗೆಯೇ ವಿದ್ಯಾರ್ಥಿಗಳ ಮೇಲೆ ಇರತಕ್ಕಂಥ ಮೊಕದ್ದಮೆಗಳನ್ನು ಹಾಗೂ ಕಾರ್ಮಿಕರ ಮೇಲೆ ಇರತಕ್ಕಂಥ ಮೊಕದ್ದಮೆಗಳು ಮತ್ತು ಜನಸಾಮಾನ್ಯರ ಮೇಲೆ ಇರತಕ್ಕಂಥ ಮೊಕದ್ದಮೆಗಳು ಮತ್ತು ಪಕ್ಷಗಳ ಮೇಲೆ ಇರತಕ್ಕಂಥ ಮೊಕದ್ದಮ್ಮೆಗಳನ್ನು ಹಿಂತೆಗೆದುಕೊಳ್ಳುತ್ತೇವೆಂದು ಯಾವುದೆಂದರೆ, ಕಪ್ಪು ಬಾವುಟ ಹಿಡಿದುಕೊಂಡಿರತಕ್ಕಂಥದ್ದು, ರೈಲು ತಡೆದಿರತಕ್ಕಂಥದ್ದು ಮತ್ತು ಘೋಷಣೆ ಕೂಗಿರತಕ್ಕಂಥದ್ದು ಹಾಗೂ ತಡೆದಿರತಕ್ಕಂಥವುಗಳಿವೆ. ಇವು ಯಾವ ಅಪರಾಧಗಳೆಂದು ಈ ರೀತಿ ಮಾಡಲಾಗುತ್ತಿದೆ? ಮತ್ತೆ ರೈತರ ಪರವಾಗಿ ಕೂಡ ಅನೇಕ ಸಲ ಹೋರಾಟ ಮಾಡಿರುತ್ತೇವೆ. ಆದ್ದರಿಂದ, ಇಂಥ ಎಲ್ಲಾ ಸಮಸ್ಯೆಗಳ ಬಗ್ಗೆ ತಾವು ಆದರ್ಶರಾಗಿರಬೇಕು ಹಾಗೆಯೇ ಇಂಥ ವಿಚಾರಗಳಲ್ಲಿ ಸ್ವಲ್ಪ ಧಾರಾಳವಾಗಿರಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತಾ, ಈ ಸಂದರ್ಭದಲ್ಲಿ ತಾವು ಉತ್ತರ ಕೊಡುವಾಗ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೆ, ಸೆಕ್ಷನ್ 436ಎ ಗೆ ಎನು ತಿದ್ದುಪಡಿ ತರುತ್ತಿದ್ದಾರೆ, ಇದನ್ನು ನಾನು ಒಂದು ಕಡೆ ಸ್ವಾಗತ ಮಾಡುತ್ತೇನೆ. ಆದರೆ, ಇನ್ನೊಂದು ಕಡೆ ಕೆಲವು ಮೊಕದ್ದಮೆಗಳಲ್ಲಿ ವಿಚಾರಣೆ ನಡೆಯುವುದಿಲ್ಲ, ಜೈಲಿಗೆ ಕೂಡ ಹಾಕುವುದಿಲ್ಲ ಏನೂ ಮಾಡಡುವುದಿಲ್ಲ, ಸುಮ್ಮನೆ ಕೋರ್ಟ್‌ಗೆ ತಿರುಗಿಸುತ್ತಿರುತ್ತಾರೆ. ನನ್ನ ಮೇಲೂ ಕೂಡ ಒಂದು ಕೇಸ್ ಇದೆ. ಅದೇನೆಂದರೆ, 2000ನೇ ಇಸವಿಯಲ್ಲಿ ಹಾಲು ದರ ಕಡಿಮೆಯಾಗಿದೆ ಅದನ್ನು ಜಾಸ್ತಿ ಮಾಡಿ ಎಂದು ನಾವು ಹೋರಾಟ ಮಾಡಿದ್ದಕ್ಕೆ 16 ಜನರ ಮೇಲೆ ಕೇಸ್ ಹಾಕಿದರು. ಆದರೆ, ಇವತ್ತಿಗೂ ಕೂಡ ಇನ್ನೂ ಚಾರ್ಜ್ ಫ್ರೇಮ್ ಮಾಡಿಲ್ಲ. ಮತ್ತೆ ಏನು ವಿಚಾರಣೆ ಕೂಡ ನಡೆಯುತ್ತಿಲ್ಲ. ಕೇವಲ ಕೋರ್ಟ್‌ಗೆ ಹೋಗಬೇಕಾಗಿದೆ. ಈ ರೀತಿಯಾದ ಒಂದು ಸ್ಥಿತಿ ನಮ್ಮಲ್ಲಿದೆ. ನಾನು ಒಂದು ಉದಾಹರಣೆಯನ್ನು ತಮ್ಮ ಮುಂದೆ ಹೇಳಿದ್ದೇನಷ್ಟೆ. ಇಷ್ಟು ದಿವಸದೊಳಗೆ ಇದರ ವಿಚಾರಣೆ ನಡೆಸಿ ಮುಗಿಸಬೇಕಾಗಿದೆ ಎನ್ನತಕ್ಕಂಥದ್ದನ್ನು ಈ 436ಎ ಯಲ್ಲಿ ಆಳವಡಿಸಬೇಕು. ಅಥವಾ ಇಷ್ಟು ದಿವಸಗಳ ವರೆಗೆ ನಡೆದ ಮೇಲೂ ಕೂಡ ಮುಗಿಯಲಿಲ್ಲ ಎಂದರೆ ಆಟೋಮ್ಯಾಟಿಕ್ ಆಗಿ ಆ ಕೇಸ್ ವಜಾ ಆಗುತ್ತದೆ. ಎನ್ನತಕ್ಕಂಥ ರೀತಿಯಲ್ಲಿ ನೀವು ತಿದ್ದುಪಡಿ ಮಾಡಿದರೆ ಬಹಳ ಪ್ರಯೋಜನವಾಗುತ್ತದೆ. ಸಾಧಾರಣವಾಗಿ ಇವತ್ತಿನ ದಿವಸ ಏನಾಗುತ್ತದೆಂದರೆ, ಹೋರಾಟದಲ್ಲಿ ಭಾವಹಿಸಿದಂತವರ ಮೇಲೆ ಕೇಸ್ ಹಾಕುತ್ತಾರೆ. ಅಲ್ಲಿನ ಹೋರಾಟಕ್ಕೆ ಯಾವ್ಯಾವ ಊರಿನ ಜನರು ಅಲ್ಲಿಗೆ ಬಂದಿರುತ್ತಾರೆ. ನಮಗೆ ಕೋಲಾರ ಜಿಲ್ಲೆಯ ಕೇಂದ್ರಕ್ಕೆ ಬೇರೆ ಬೇರೆ ತಾಲ್ಲೂಕಿನಿಂದ ಅಲ್ಲಿಗೆ ಬಂದು ಪ್ರತಿಭಟನೆ ಮಾಡಿರುತ್ತಾರೆ. ಈ ಸಂದರ್ಭದಲ್ಲಿ ಅವರ ಮೇಲೆ ಕೇಸ್ ಹಾಕುತ್ತಾರೆ. ಇದರಲ್ಲಿ ಒಬ್ಬೊಬ್ಬರದು ಒಂದೊಂದು ತಾಲ್ಲೂಕಿನಲ್ಲಿ ಯಾವ್ಯಾವುದೋ ಊರು ಇರುತ್ತದೆ. ಆತ ಕೇಸ್‌ಗೆ ಬರುವುದಕ್ಕೆ ಆಗುವುದಿಲ್ಲ ಅವರು ಬರಲಿಲ್ಲ ಎಂಬ ಕಾರಣಕ್ಕಾಗಿ ವರ್ಷಾನುಗಟ್ಟಲೆ ತಿರುಗಿಸುತ್ತಿರುತ್ತಾರೆ. ಇದನ್ನು ಸ್ಪ್ಲಿಟ್ ಮಾಡಿ ನಡೆಸಬಹುದೆಂದು ಪ್ರಾವಿಜನ್ ಇದೆ. ಆದರೆ, ಇದನ್ನು ಸ್ಪ್ಲಿಟ್ ಮಾಡುವುದಿಲ್ಲ. ಮತ್ತೆ ಸ್ಪ್ಲಿಟ್‌ಮಾಡುವುದಕ್ಕೆ ಕೆಲವು ಪ್ರೋಸಿಜರ್ಗಳಿವೆ. ಹೀಗಾಗಿ, ಇವತ್ತಿನದಿವಸ ತುಂಬಾ ಸಮಸ್ಯೆಗಳು ಆಗಿವೆ. ಆದ್ದರಿಂದ, ದಯವಿಟ್ಟು 436ಎ ಯಲ್ಲಿ ತಂದರೆ ಅನೂಕೂಲವಾಗುತ್ತದೆ.

ಶ್ರೀ ಎಚ್. ಕೆ. ಪಾಟೀಲ್ : ಮಾನ್ಯ ಸದಸ್ಯರು ಈಗಾಗಲೇ ಒಂದು ಉದಾಹರಣೆ ಕೊಟ್ಟಿದ್ದೀರಿ. ಹಾಲಿನ ದರ ಅಥವಾ ಇನ್ಯಾವುದೋ ಒಂದು ಚಳುವಳಿಯಲ್ಲಿ ನಿಮ್ಮ ಜೊತೆ ನೂರಾರು ಜನರು ಇರಬಹುದು. ಈ ಸಂದರ್ಭದಲ್ಲಿ ಕೆಲವು ಕೆಟ್ಟ ಶಕ್ತಿಗಳು ಬಸ್ಸಿಗೆ ಬೆಂಕಿ ಹಚ್ಚಿದ್ದಾರೆಂದು ತಾವು ತಿಳಿದುಕೊಳ್ಳಿ ಆದರೆ, ನೀವು ಅದರಲ್ಲಿರುವುದಿಲ್ಲ. ನೀವು 144ನೇ ಕಲಂನ್ನು ಉಲ್ಲಂಘನೆ ಮಾಡಿದ್ದೀರಿ ಅಷ್ಟೆ ನಿಮ್ಮ ಗುಮಾನಿ ಇರುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ನಿಮ್ಮ ಹೆಸರು ಕೂಡಿಸಿಬಿಟ್ಟಿರುತ್ತಾರೆ. ಅಂತಹ ಪ್ರಸಂಗಗಳಲ್ಲಿ 144ನೇ ಕಲಂನ್ನು ಉಲ್ಲಂಘನೆ ಮಾಡಿದ್ದನ್ನು ತಾವು ಒಪ್ಪುವುದಾದರೆ ತಕ್ಷಣ ತಮ್ಮ ಏನು ಟ್ರೈಯಲ್ ಇರುತ್ತದೆ ಪೂರ್ಣಗೊಂಡು, Play Bargain ಲಾಭ ನಾವು ಪಡೆದುಕೊಂಡು ಆ ಒಂದು ಕೇಸ್‌ದಿಂದ ವಿಮುಕ್ತರಾಗತಕ್ಕಂಥ ಅವಕಾಶ ಈ ಒಂದು ವ್ಯವಸ್ಥೆ ಮೂಲಕ ಬರುತ್ತದೆ; ಅದು ಉದ್ದೇಶ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಅದನ್ನು ಇಲ್ಲಿ ಸ್ಪಷ್ಟವಾಗಿ ನಮೂದಿಸಿಲ್ಲ. ಇಲ್ಲದಿದ್ದರೆ ಅದು ಹಾಗೆ ಡ್ರಾಗಾನ್ ಆಗುತ್ತಾ ಹೋಗುತ್ತದೆ. ಎರಡನೇಯದಾಗಿ ಇದನ್ನು ನೀವು ಸ್ವಲ್ಪ ಸ್ಪಷ್ಟಪಡಿಸಿದರೆ ಒಳ್ಳೆಯದಾಗುತ್ತದೆ. ಅಪರಾಧದ ಯಾವುದೋ ಒಂದು ಕಲಂನಲ್ಲಿ ಅವನನ್ನು ಅನ್ ಟ್ರೈಯಲ್ ಆಗಿ ಇಟ್ಟಿರುತ್ತಾರೆ. ಸೆಕ್ಷನ್307, 436, 326, 323, ಅದರಲ್ಲಿ ಅವರನ್ನು ಅರೆಸ್ಟ್ ಮಾಡಿರುತ್ತಾರೆ. ಸೆಕ್ಷನ್ 326ರ ಕೆಳಗಡೆ ಮ್ಯಾಕ್ಸಿಮಮ್ ಫನಿಷ್‌ಮೆಂಟ್ ಎಷ್ಟು? ಆ ಫನಿಷ್‌ಮೆಂಟ್‌ನಲ್ಲಿ ಅರ್ಧ ಅಂತ ನೀವು ಇಲ್ಲಿ ಹೇಳತಕ್ಕಂಥದ್ದು ಇದೆ. ಅಥವಾ ಯಾವುದೇ ಸೆಕ್ಷನ್‌ನಲ್ಲಿ 307ಕ್ಕೆ ಸೆವೆನ್ ಇಯರ್ಸ್ ಎಂದು ಇರುತ್ತದೆ; If it is three and a half years, ಆದರೆ, ಆ ತರಹದ ಪ್ರಶ್ನೆ ಬರತಕ್ಕಂಥದ್ದು ಎಂದು ನಾನು ಭಾವಿಸಿಕೊಂಡಿರತಕ್ಕಂಥದ್ದು. ನಾನ್ ಬೇಲ್ ಕೇಸ್‌ಗೆ ಬೇಲಬಲ್ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ಇಲ್ಲಿ ನಾನ್ ಬೇಲಬಲ್ ಪ್ರಶ್ನೆ ಬರತಕ್ಕಂಥದ್ದು. ಅದನ್ನು ಅರ್ಧ ಎನ್ನುವುದಕ್ಕಿಂತ ಇನ್ನೂ ಸ್ವಲ್ಪ ಕಡಿಮೆ ಮಾಡುವುದು ಒಳ್ಳೆಯದು. ಏಕೆಂದರೆ, 326 ರಲ್ಲಿ ಮಾಕ್ಸಿಮಮ್, period of conviction 6 ತಿಂಗಳು ಇರುತ್ತದೆ. ಅವನಿಗೆ ಮೂರು ತಿಂಗಳು ಯಾವುದೋ ಕಾರಣಕ್ಕೆ ಬೇಲ್ ಕೊಡುವುದಿಲ್ಲ. ಸೆಕ್ಷನ್ 307ರಲ್ಲಿ ಅದು ಕಾನೂನಿನಲ್ಲಿ ಇಲ್ಲದಿದ್ದರೂ Judges ಎನು ಮಾಡುತ್ತಾರೆಂದರೆ, ಇಂಜ್ಯುರ್ಟ್ ಆಗಿ ಆಸ್ಪತ್ರೆಯಲ್ಲಿದ್ದಾನೆ ಎನ್ನುವ ಕಾರಣಕ್ಕೋಸ್ಕರ ಆಸ್ಪತ್ರೆಯಿಂದ ಬಿಡುಗಡೆ ಆಗುವವರೆಗೆ ನಿಮಗೆ ಬೇಲ್ ಕೊಡುವುದಿಲ್ಲವೆಂದು ರಿಜೆಕ್ಟ್ ಮಾಡುತ್ತಾರೆ. ಆದರೆ ಕೆಲವರು ಆಸ್ಪತ್ರೆಯಲ್ಲಿ 2030 ದಿವಸ ಸುಮ್ಮನೆ ಇರಲಿಕ್ಕೆ ಸರ್ಟಿಫಿಕೇಟ್ ಕಳುಹಿಸುತ್ತಾರೆ. ಅದೇ ಕಾರಣಕ್ಕೋಸ್ಕರ ಸುಮಾರು ಕಡೆ ನಾವು ನೋಡುತ್ತಿರುತ್ತೇವೆ. ಕೆಲವು ವ್ಯಕ್ತಿಗಳು ಬಂಧನವಾಗುವಂಥ ಸ್ಥಿತಿ ಬಂದು ಬಿಟ್ಟರೆ ಆಸ್ಪತ್ರೆಯಲ್ಲಿ ಜಾಯಿನ್ ಆಗಿ ಬಿಟ್ಟಿದ್ದಾರೆಂದು ಡಾಕ್ಟರ್ ಹತ್ತಿರ ಒಂದು ಸರ್ಟಿಫಿಕೇಟ್ ತೆಗೆದುಕೊಂಡು ಬಂದು ಬಿಡುವುದು. ಹಾಗಾಗಿ ಅವರನ್ನು ಅರೆಸ್ಟ್‌ದಿಂದ ಆವೈಡ್ ಮಾಡತಕ್ಕಂಥ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಇದನ್ನು ಇದರಲ್ಲಿ ಸೇರಿಸಿ ಮಾಡಬೇಕು. ಇದರೊಂದಿಗೆ ಈ ತಿದ್ದುಪಡಿಯನ್ನು ಒಪ್ಪಬಹುದೆಂಬುದು ನಮ್ಮ ಅಭಿಪ್ರಾಯ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ನಾನು ಈ ತಿದ್ದುಪಡಿಯನ್ನು ಸ್ವಾಗತ ಮಾಡುತ್ತೇನೆ. Country of Santiago Districtನಲ್ಲಿ 94.4 ಪರ್ಸೆಂಟ್ ಕನ್ವಿಕ್ಷನ್ ಇಲ್ಲಿ ಅದು ಆಗುವುದಿಲ್ಲ ಯಾಕೆಂದರೆ, hard core criminals habitual offenders ಇದ್ದರೆ ಅವರ ಎದುರಿಗೆ ಸಾಕ್ಷಿ ಹೇಳುವವರೇ ಇಲ್ಲ. ಅವರಿಗೆ ಬೇಗ ಬೇಲ್ ಸಿಕ್ಕು ಬಿಡುತ್ತದೆ. ಕೆಲವೊಮ್ಮೆ ಕೇಸ್ ಫಿಕ್ಸ್ ಮಾಡಿ ಜೈಲ್‌ನಲ್ಲಿ ಕುಳಿತಿರುವವರಿಗೆ, ಅದರಲ್ಲಿ ಕೆಲವು ಜಡ್ಜಸ್ ಮೇಲೆ ಡಿಪೆಂಡ್ ಆಗುತ್ತದೆ. ಕೆಲವು ಜಡ್ಜಸ್ ಬೇಲ್ ಗ್ರ್ಯಾಂಟ್ ಮಾಡುತ್ತಾರೆ. ಕೆಲವರು 307, 302 ಎಂದ ಕೂಡಲೇ ಬೇಲ್ ಕೊಡುವುದಿಲ್ಲ. ಅದಕ್ಕಾಗಿ ವಕೀಲರೂ ಸಹ ಕಾಯುವಂಥ ಪರಿಸ್ಥಿತಿ ಬಂದಿದೆ. ಯಾವ ಜಡ್ಜ್ ಮುಂದೆ ಹೋಗಬೇಕು, ಯಾವ ಜಡ್ಜ್ ಮುಂದೆ ಹೋಗಬಾರದು, ಮೂವ್ ಮಾಡಬೇಕೆ ಅಥವಾ ಬೇಡವೆ ಎನ್ನುವ ಪರಿಸ್ಥಿತಿ ಬಂದಿದೆ. ಇದು ಒಂದು ಒಳ್ಳೆಯ ತಿದ್ದುಪಡಿಯನ್ನು ತಾವು ತಂದಿರುತ್ತೀರಿ. ಆದರೆ ಇದರಲ್ಲಿ, It should be for one time. ಯಾರಿಗಾದರೂ ಈ ಒಂದು "benefit of amendment ನಿಂದ conviction 50%

ಆಗಿ ಅವನು ಹೊರಗೆ ಬಂದು, ಇನ್ನೊಂದು ಅಫೆನ್ಸ್ ಮಾಡಿದಾಗ, he should not to be given benefit of this Section again.

ಶ್ರೀ ಹೆಚ್. ಕೆ. ಪಾಟೀಲ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, In the definition itself such offender is disqualified. First offender, that is a person who is not convicted earlier for the same offence. ಎಂದಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, conviction ಅದನ್ನು ಮಾಡುವಂಥಾದ್ದು, ಅದಕ್ಕೆ ಕೆಲವೊಂದು ಕೇಸನ್ನು ಹಲವಾರು ವರ್ಷಗಳ ಕಾಲ ಕನ್ವಿಕ್ಷನ್ ಆಗುತ್ತದೋ ಇಲ್ಲವೋ ಅವರನ್ನು ಅನೇಕ ಭಾರೀ ಬಿಡುಗಡೆ ಮಾಡಿರುವಂಥದ್ದು ಇದೆ. ಮಾನ್ಯ ಸುಪ್ರೀಂಕೋರ್ಟಿನ ಆರ್ಡರ್ ಪ್ರಕಾರ, ಅದು ಒಂದು ಭಾಗವಾದರೆ ಇನ್ನೊಂದು ಕಡೆಯಲ್ಲಿ ಆಕಸ್ಮಿಕ ಘಟನೆ ನಡೆದಾಗ ಕನ್ವಿಷನ್ ಹೆಚ್ಚಾಗಿ ಆಗುತ್ತದೆ. ಅವರಿಗೆ ಬೇಲ್ ಸಿಗದಂಥ ಪರಿಸ್ಥಿತಿ, ಅಂತಹದ್ದಕ್ಕೆ ಇದು ಬಹಳ ಸಹಾಯವಾಗುತ್ತದೆ. ತಾವು ಅನಾವಶ್ಯಕವಾಗಿ ಜೈಲ್‌ನಲ್ಲಿ ಕೂಡಿಸಿ ಕೊಂಡರೆ ಸರ್ಕಾರದ ಮೇಲೆ ಹೊರೆಯಾಗುತ್ತದೆ, ಮತ್ತು ಅವರ ಹ್ಯೂಮನ್ ರೈಟ್ಸ್ ಬಗ್ಗೆ ತಾವು ಎನು ಹೇಳಿದಿರಿ, unnecessary, he has to undergo. ಟ್ರೈಯಲ್ ಟೈಮ್‌ನಲ್ಲಿ, ಜೈಲ್‌ನಲ್ಲಿ ವಾಸಮಾಡುವಂಥಹ ಉದ್ದೇಶವನ್ನು ತಪ್ಪಿಸುವಂಥದ್ದಕ್ಕೆ ತಾವು ಏನು ತಂದಿರುವ ಈ ತಿದ್ದುಪಡಿಯನ್ನು ಸ್ವಾಗತ ಮಾಡುತ್ತೇನೆ. ಹಾಗೂ ಇದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಕೆ. ಜಿ. ಬೋಪಯ್ಯ (ಮಡಿಕೇರಿ) : ಮಾನ್ಯ ಅಧ್ಯಕ್ಷರೆ, ತಾವು ಏನು ತಿದ್ದುಪಡಿ ಸೆಕ್ಷನ್ 167 ಅದರಲ್ಲಿ ಯಾವುದೇ ಒಬ್ಬ ಅಪರಾಧಿಯನ್ನು, in person produce ಮಾಡಬಹುದು ಅಥವಾ ವೀಡೀಯೊ ಲಿಂಕೇಜ್ ಮೂಲಕ ಪ್ರೊಡ್ಯೂಸ್ ಮಾಡಬಹುದು. Then, he can be extended his custody ಅಂತ. ಎನಿದೆ; ಈ ವಿಡಿಯೋ ಲಿಂಕೇಜ್ ಏನಿದೆ, ಅದನ್ನು ಪೋಲೀಸರು ದುರುಪಯೋಗ ಮಾಡುವಂಥ ಸಾಧ್ಯತೆಗಳು ಹೆಚ್ಚಿವೆ. ಯಾವುದೇ ಒಬ್ಬ ಅಪರಾಧಿಯನ್ನು ಬಂಧಿಸಿ ಅನಂತರ ವ್ಯಕ್ತಿಗತವಾಗಿ ಪ್ರೊಡ್ಯೂಸ್ ಮಾಡಿದಾಗ ಪೋಲಿಸರಿಂದ ಏನಾದರೂ ಕಿರುಕುಳವಾಗಿದ್ದರೆ ನ್ಯಾಯಾಧೀಶರ ಮುಂದೆ ಹೇಳಿಕೊಳ್ಳುವಂಥ ಒಂದು ಅವಕಾಶ ಇದೆ. ಬಹುಶಃ ಈ ವೀಡೀಯೊ ಲಿಂಕೇಜ್ ಮುಖಾಂತರ ಪ್ರೊಡ್ಯೂಸ್ ಮಾಡಿದರೆ, ಈ ಒಂದು ಅವಕಾಶ ತಪ್ಪಿ ಹೋಗುತ್ತದೆ. ಬಹುಶಃ ಇವತ್ತು ನೀವು ಏನೊಂದು ಕ್ರಿಮಿನಲ್ ಜಸ್ಟೀಸ್ ಕೊಡುವುದಕ್ಕೆ ಹೊರಟಿದ್ದೀರಿ, ಇದು ಕ್ರಿಮಿನಲ್ ಇನ್ ಜಸ್ಟೀಸ್ ಆಗುತ್ತದೆ. ಹಾಗಾಗಿ ಈ ವೀಡಿಯೋ ಲಿಂಕೇಜ್ ಎನ್ನುವಂಥದ್ದನ್ನು ತೆಗೆದು ಹಾಕಬೇಕೆಂದು ಹೇಳಿ ನನ್ನ ಒತ್ತಾಯ ಇದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರನ್ನು ಕೋರ್ಟಿಗೆ ಪ್ರೊಡ್ಯೂಸ್ ಮಾಡಿದಾಗ ಇಂಜ್ಯುರೀಸ್ ತೋರಿಸುವುದಕ್ಕಾಗುತ್ತದೆ, ಇಲ್ಲದಿದ್ದರೆ ಅದನ್ನು ತೋರಿಸಲಿಕ್ಕಾಗುವುದಿಲ್ಲ ಎನ್ನುವ ಭಾವನೆ ಕೋರ್ಟಿಗೆ ಇದೆ.

ಶ್ರೀ ಹೆಚ್. ಕೆ. ಪಾಟೀಲ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಕಂಪ್ಲೇಂಟ್ ಮಾಡಿರತಕ್ಕಂಥ ಸಂದರ್ಭದಲ್ಲಿ ಅಲ್ಲ. ಈಗ ಕೆಲವು ಸಂದರ್ಭಗಳಲ್ಲಿ ಸೆಕ್ಯುರಿಟಿ ಕಾರಣಕ್ಕಾಗಿಯೋ ಅಥವಾ

ಡಿಸ್ಟೆನ್ಸ್ ಕಾರಣಕ್ಕಾಗಿಯೋ ಅವರನ್ನು ಪ್ರೊಡ್ಯೂಸ್ ಮಾಡುವುದಕ್ಕಾಗುವುದಿಲ್ಲ. ಮ್ಯಾಜಿಸ್ಟೇಟ್ ಹತ್ತಿರ ಪ್ರೊಡ್ಯೂಸ್ ಮಾಡಬೇಕಾಗಿರುತ್ತದೆ. ಈಗ ಇರತಕ್ಕಂಥ ಮಾಡರ್ನ್ ಟೆಕ್ನಾಲಜಿಯನ್ನು ಉಪಯೋಗ ಮಾಡಿ ನ್ಯಾಯವನ್ನು ಒದಗಿಸುವುದಕ್ಕಾಗುತ್ತದೆ ಹಾಗೂ ಈ ಸೆಕ್ಯುರಿಟಿ ಏನು ದೊಡ್ಡ ಎಲಾಬ್ರೇಟ್ ಆರೇಂಜ್‌ಮೆಂಟ್ ಮಾಡಬೇಕು ಅದನ್ನು ಕಡಿಮೆಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ಹಾಗೂ ಯಾವುದೇ ರೀತಿಯಾಗಿ ಅನಾನುಕೂಲತೆ ನಿರಪರಾಧಿಗೆ ಆಗದಂತೆ ಆ ಟೆಕ್ನಾಲಜಿಯನ್ನು ಉಪಯೋಗ ಮಾಡಬಹುದು. ಇದು ವೆಸ್ಟರ್ನ್ ಕಂಟ್ರೀಸ್ ದೊಳಗೆ ಎಲ್ಲಾ ಕಡೆ ಇದೆ. ನಮ್ಮಲ್ಲಿ ಮಾತ್ರ ಇಲ್ಲ. ನಾವು ಇನ್‌ಫಾರ್ಮೇಶನ್ ಟೆಕ್ನಾಲಜಿಯೊಳಗೆ ಅಮೇರಿಕಾಗಿಂತ ಮುಂದಿದ್ದೇವೆ. ಆದರೆ ಅದರ ಉಪಯೋಗ ನಮ್ಮ ಜನರಿಗೆ ಆಗಿಲ್ಲ. ಅದನ್ನು ಬಳಕೆ ಮಾಡಿಕೊಳ್ಳತಕ್ಕಂಥ ಪ್ರಯತ್ನ ಇಲ್ಲಿ ಆಗುತ್ತದೆ.

ಶ್ರೀ ಕೆ. ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಹಾಗಾಗಿ ನಾನು ಅದೆಲ್ಲವನ್ನು ಒಪ್ಪಿದೆ. ಆದರೆ ಇವತ್ತು ಪೋಲೀಸ್ ವ್ಯವಸ್ಥೆ ಹೇಗಿದೆ. ಇದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗಿದೆ. ಯಾರಿಗೋ ಸೆಕ್ಯುರಿಟಿ ರೀಸನ್ ಪ್ರೂಡ್ಯೂಸ್ ಮಾಡತಕ್ಕಂಥವರು ಎಷ್ಟು? ಸಾಮಾನ್ಯ ಜನಕ್ಕೆ ಇವತ್ತು ಯಾವರೀತಿಯ ಕಿರುಕುಳಗಳು ಆಗುತ್ತಿವೆ. ಎಂಬುದನ್ನು ನೋಡಬೇಕು. ಬಹುಶಃ ಕಾನೂನು ಹೇಳುತ್ತದೆ. 24 ಗಂಟೆಯೊಳಗೆ ಅರೆಸ್ಟ್ ಮಾಡಿ ಪ್ರೊಡ್ಯೂಸ್ ಮಾಡಬೇಕು ಎಂದು ಎಷ್ಟು ಜನರನ್ನು ಇವತ್ತು 24 ಗಂಟೆಯೊಳಗೆ ಪ್ರೊಡ್ಯೂಸ್ ಮಾಡುತ್ತಿದ್ದಾನೆ. ಈ ಒಂದು ಪ್ರಾವಿಜನ್ ಇವತ್ತು ಅಡ್ವಾನ್ಸ್ ಟೆಕ್ನಾಲಜಿ ಎಂದು ಇದರಿಂದ ಸಾಮಾನ್ಯ ಜನರಿಗೆ ಇವತ್ತು ತೊಂದರೆಯಾಗುವಂಥಾದ್ದು ಇದೆ. ಈ ಒಂದು ಪ್ರೂಡ್ಯೂಸ್ ಥ್ರೂ ಎಲೆಕ್ಟ್ರಾನಿಕ್ಸ್ ವೀಡಿಯೋ ಲಿಂಕೇಜ್‌ನ್ನು ತೆಗೆಯಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಅದರ ಜೊತೆಗೆ ಇವತ್ತು ಸ್ಪೀಡಿ ಡಿಸ್ಪೋಸ್ ಬಗ್ಗೆ ತಾವು ಎನು ಅಭಿಪ್ರಾಯ ಪಟ್ಟಿದ್ದೀರಿ ಸ್ವಲ್ಪ, compoundable offence Section 320, 321 ಕೆಳಗಡೆ ಬರುತ್ತದೆ, ಅದಕ್ಕೆ ಇನ್ನೂ ಕೆಲವು ಹೆಚ್ಚಿನ ಐಪಿಸಿಗಳನ್ನು ಸೇರಿಸಬಹುದೆಂದು ನನ್ನ ಸಲಗೆ ಇದೆ. ಉದಾಹರಣೆಗೆ ಆಕ್ಸಿಡೆಂಟ್, ಯಾರಿಗೂ ಇಂಜ್ಯೂರಿಸ್ ಆಗಿರುವುದಿಲ್ಲ, ಎರಡು ವೆಹಿಕಲ್‌ಗಳು ಟಚ್ ಆದರೆ ಪೊಲೀಸ್‌ನವರು ಬೇಕು ಎಂದು ಹೇಳಿ ಕೇಸ್ ಹಾಕಿರುತ್ತಾರೆ. ಆದರೆ ಇವತ್ತು ಅದನ್ನು ರಾಜೀ ಮಾಡಿಕೊಳ್ಳುವಂಥ ಪರಿಸ್ಥಿತಿಯಲ್ಲಿ ಇಲ್ಲ. ಉದಾಹರಣೆಗೆ ಅಂತಹ ಸಣ್ಣ ಪುಟ್ಟ ಕಳ್ಳತನ, ಅದನ್ನು ಇವತ್ತು ರಾಜೀ ಮಾಡಿಕೊಳ್ಳುವಂಥದ್ದು ಇಲ್ಲ. ಇಂಥದ್ದರ ಬಗ್ಗೆ ಕೆಲಸ ಮುಗಿಯುವವರೆಗೆ ಅವರು ಜೈಲಿನಲ್ಲಿ ಇರಬೇಕಾದರೆ, ಈ compudable offences ಎನಿವೆ, ಅದನ್ನು ಸೇರಿಸಬೇಕೆಂದು ಹೇಳಿ, ಈ ಮೂಲಕ ನಾನು ತಮ್ಮನ್ನು ಒತ್ತಾಯ ಮಾಡುತ್ತೇನೆ. ಯಾವುದೇ ಕಾರಣಕ್ಕೆ ಇವತ್ತು ಏನು ಪರ್ಸನಲ್ ಲಿಬರ್ಟಿ ಎಂದು ಎನಿದೆ ಅದಕ್ಕೆ ತೊಂದರೆಯಾಗುವುದು ಈ ಸೆಕ್ಷನ್ 167 ರಲ್ಲಿದೆ. ಎಲ್ಲಾ ಸಮಗ್ರವಾಗಿ ಪರಿಶೀಲನೆ ಮಾಡಿದರೆ ಇವತ್ತು ಹ್ಯೂಮನ್ ರೈಟ್ಸ್ ಕಮಿಷನ್ ಎನೇನು ಹೇಳಿದೆ ಎಂಬುದನ್ನು ನೋಡಬೇಕು ಯಾವುದೇ ಒಂದು ವ್ಯಕ್ತಿಯನ್ನು ಅರೆಸ್ಟ್ ಆದ ಮೂರು ಗಂಟೆಯೊಳಗೆ ಅವರ ಸಂಭಂಧಿಕರಿಗೆ ತಿಳಿಸುವಂಥದ್ದು. ಆಗಬೇಕು ವಕೀಲರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅವರಿಗೆ ಅವಕಾಶ ಮಾಡಿಕೊಡಬೇಕು. ಜಾಮೀನು ಕೊಡುವುದಿದ್ದರೆ

ಜಾಮೀನಿಗೆ ಅವಕಾಶ ಕೊಡಬೇಕು. ಇದು ಯಾವುದೇ ಸುಧಾರಣೆಗಳು ಇದರಲ್ಲಿ ಕಂಡು ಬರುತ್ತಿಲ್ಲ. ಇದೂ ಕೂಡ ಇವತ್ತಿನ ವ್ಯವಸ್ಥೆಯಲ್ಲಿ ಖಂಡಿತ ಅವಶ್ಯಕತೆ ಇದೆ ಎಂದು ಹೇಳಿ ನನ್ನ ಭಾವನೆ. ಏಕೆಂದರೆ ರಿಫಾರ್ಮೇಶನ್ ಅಪರಾಧಿಗಳಿಗೆ ಮಾತ್ರ ಅಲ್ಲ, ಈ ಪೋಲಿಸ್‌ನವರು ಇನ್ನೂ ಆ ಮಟ್ಟಕ್ಕೆ ರಿಫಾರ್ಮ್ ಆಗಿಲ್ಲ. ಇದು ನಮ್ಮ ಅನುಭವ ಹಾಗಾಗಿ ಅದನ್ನು ಕೂಡ ಇದರಲ್ಲಿ ಸೇರಿಸಬೇಕೆಂದು ಹೇಳಿ ನಾನು ಒತ್ತಾಯಾವನ್ನು ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ): ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ರವರು ಆಗಲೇ ರೆಫರ್ ಮಾಡಿ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ. ಇವತ್ತು ಹಲವಾರು ರೈತರ ಹೋರಾಟಗಳು ಇರಬಹುದು, ಇನ್ನಿತರ ಸಾರ್ವಜನಿಕ ಹೋರಾಟ ಇರಬಹುದು, ಅಂತಹ ಕಡೆ ಇವರು ಏನು ಕ್ರಿಮಿನಲ್ ಕೇಸುಗಳನ್ನು ಹಾಕಿದ್ದಾರೆ, ಅದನ್ನು ವಿತ್‌ಡ್ರಾ ಮಾಡುತ್ತೆವೆಂದು ಕಳೆದ ಒಂದು ವರ್ಷಗಳಿಂದ ಮುಖ್ಯಮಂತ್ರಿಗಳು ಹೇಳುತ್ತಲೇ ಬಂದಿದ್ದಾರೆ. ಇವತ್ತು ಭೀಮಾ ನದಿ ಹೋರಾಟದ ವಿಚಾರ ಬಂದಾಗ ನೂರಾರು ರೈತರ ಮೇಲೆ ಕಟ್ಟಳೆಗಳು ಇವೆ, ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಡಿಸಿಷನ್ ಆಗಿದೆ, ಅದು ಇನ್ನೂ ವಿತ್‌ಡ್ರಾ ಆಗಲಿಲ್ಲ, ಇವತ್ತು ಪ್ಯಾಕೇಜ್ ಇಂಪ್ಲಿಮೆಂಟ್ ಆಗಲಿಲ್ಲವೆಂದು ಬಾಗಲಕೋಟೆಯಲ್ಲಿ ಹೋರಾಟ ನಡೆಯಿತು, ಅಲ್ಲಿ ನೂರಾರು ಜನರ ಮೇಲೆ ಕಟ್ಟಳೆಗಳು ಬಿದ್ದಿವೆ. ಅಲ್ಲಿ ಸತ್ಯಾಗ್ರಹಗಳು ನಿಂತ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಆಲಿಪಾರ್ಟಿ ಸಭೆಯನ್ನು ಕರೆದಂತಹ ಸಂದರ್ಭದಲ್ಲಿ ವಿತ್‌ಡ್ರಾ ಮಾಡುತ್ತೇವೆಂದು ಆಗಲೂ ಕೂಡ ಭರವಸೆಯನ್ನು ಕೊಟ್ಟರು. ಬಿಜಾಪುರ ಜಿಲ್ಲೆ ಸಮಗ್ರ ನೀರಾವರಿಯ ಸಲುವಾಗಿ ಹೋರಾಟ ಇತ್ತು, ಅಲ್ಲಿ ಕ್ರಿಮಿನಲ್ ಕೇಸುಗಳು ಆಗಿವೆ. ಅದನ್ನು ವಿತ್ ಡ್ರಾ ಮಾಡುತ್ತೇವೆಂದು ಹೇಳಿದರೂ ಇವತ್ತಿನವರೆಗೂ ಅದು ವಿತ್ ಡ್ರಾ ಆಗಲಿಲ್ಲ. ಕಾವೇರಿ ನದಿಯ ವಿಚಾರದಲ್ಲಿ ಇಲಿಯ ಭಾಗದ ರೈತರು ಹೋರಾಟ ಮಾಡಿದಂಥಹ ಸಂದರ್ಭದಲ್ಲಿ ಅವರ ಮೇಲೂ ಸಹ ಸಾಕಷ್ಟು ಕಟ್ಟಳೆಗಳು ಇವೆ: ಹೀಗಾಗಿ ಸರ್ಕಾರ ಭರವಸೆ ಕೊಟ್ಟಿರುವುದು ಇದುವರೆವಿಗೂ ಆಗಿರುವುದಿಲ್ಲ. ಹೀಗಾಗಿ ಅದರ ಬಗ್ಗೆ ತಕ್ಷಣ ಏನಾದರೂ ಕ್ರಮವನ್ನು ಕೈಗೊಳ್ಳಬೇಕೆಂಬ ಆಗ್ರಹವನ್ನು ನಾವು ಮಾಡುತ್ತಿದ್ದೇವೆ. ಇವತ್ತು ಸಾರ್ವಜನಿಕ ಹೋರಾಟದಲ್ಲಿ ನನ್ನ ಮೇಲೆ ಒಂದಿಷ್ಟು ಕೇಸುಗಳು ಇವೆ, ನಾಲ್ಕೈದು ಕೇಸುಗಳು ಇವೆ. ಇವತ್ತು ನೈರುತ್ಯ ರೈಲ್ವೆ ಬಗ್ಗೆ ಇರಬಹುದು, ಹೈಕೋರ್ಟು ಪೀಠದ ಬಗ್ಗೆ ಇರಬಹುದು ಇನ್ನಿತರ ಹಲವಾರು ಹೋರಾಟ ಮಾಡಿರುವಂಥಹ ಸಂದರ್ಭದಲ್ಲಿ ಇವತ್ತು ಕೇಸುಗಳು ಇವೆ. ಆದರೆ ಐಪಿಸಿ ಸೆಕ್ಷನ್ ಏನು ಹಾಕುತ್ತಾರಲ್ಲಾ, ದೊಂಬಿ, ಲೂಟಿ, ಹಲ್ಲೆ, ಇವೆಲ್ಲವುಗಳನ್ನೂ ಸೇರಿಸಿ ಹಾಕಿರುತ್ತಾರೆ. ನಾವು ಯಾವುದೇ ಒಂದು ಹಿಂಸಾತ್ಮಕ ರೀತಿಯಲ್ಲಿ ಹೋರಾಟವನ್ನು ಮಾಡಿಲ್ಲ. ಇವತ್ತು ನಮ್ಮ ಮೇಲೆ ಎನು ಕ್ರಿಮಿನಲ್ ಕೇಸುಗಳು ಇವೆ, ಎನು ಐಪಿಸಿ ಸೆಕ್ಷನ್‌ಗಳನ್ನು ಹಾಕಿದ್ದಾರೆ. ಆ ಸೆಕ್ಷನ್‌ನಲ್ಲಿ ದೊಂಬಿ, ಲೂಟಿ ಇಷ್ಟುಗಳೆಲ್ಲವೂ ಇವೆ. ಇವತ್ತು ನಾವು ಚುನಾವಣಾ ಆಯೋಗದ ನಿಯಮದ ಪ್ರಕಾರ ನಾವು ಚುನಾವಣೆಯಲ್ಲಿ ನಾಮಪತ್ರವನ್ನು ಸಲ್ಲಿಸುವಂತಹ ಸಂದರ್ಭದಲ್ಲಿ ನಾವು ನಮ್ಮ ಮೇಲೆ ಏನೇನು ಕ್ರಿಮಿನಲ್ ಕೇಸುಗಳು ಇವೆ ಎಂಬುದರ ಬಗ್ಗೆ ಸೆಕ್ಷನ್ ಸಹಿತ ಅಲ್ಲಿ ಹಾಕಬೇಕಾಗಿದೆ. ಅಲ್ಲಿ ಎಲ್ಲಾ ವಿವರಗಳನ್ನೂ ಕೂಡ ಕೊಡಬೇಕು. ಇವತ್ತು ಸಾರ್ವಜನಿಕರಿಗೆ

ಏನಾಗುತ್ತದೆಂದರೆ, ಈ ಜಗದೀಶ್ ಶೆಟ್ಟರ್ ರವರು ಯಾವಾಗ ದೊಂಬಿ ಮತ್ತು ಲೂಟಿಯನ್ನು ಮಾಡಿದರು ಯಾವಾಗ ಯಾರ ಮೇಲೆ ಹಲ್ಲೆ ಮಾಡಿದರು ಎನ್ನುವುದರ ಬಗ್ಗೆ ಸಾರ್ವಜನಿಕರಿಗೆ ಕಲ್ಪನೆಗೆ ಬರುತ್ತದೆ. ಇದರ ಬಗ್ಗೆಯೂ ಈ ಕೇಸಿನ ಬಗ್ಗೆ ಚಿಂತನೆಯನ್ನೂ ಮಾಡಬೇಕಾಗುತ್ತದೆ. ಇಂತಹ ಸಾರ್ವಜನಿಕ ಹೋರಾಟದ ಬಗ್ಗೆ ನಡೆದಂತಹ ಸಂದರ್ಭದಲ್ಲಿ ಅದರ ಬಗ್ಗೆ ಸರ್ಕಾರ ತಕ್ಷಣ ಕ್ರಮವನ್ನು ಕೈಗೊಳ್ಳುವುದು ಅದರ ಬಗ್ಗೆ ವಿತ್‌ಡ್ರಾ ಮಾಡುವುದು ಆಗಬೇಕು.

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕೂಡ ಮೊನ್ನೆ ತಾನೆ ವಿದ್ಯುತ್ತಿನ ಬಗ್ಗೆ ಬಂಟ್ವಾಳ ತಾಲ್ಲೂಕಿನಲ್ಲಿ 500 ಜನರ ಮೇಲೆ ವಿನಾಃ ಕಾರಣ ಕೇಸನ್ನು ಹಾಕಿದ್ದಾರೆ. ಹಾಗಾಗಿ 5 ಮತ್ತು 500 ಜನರು ಎಂದು ಸೇರಿಸಿಕೊಂಡು ಮಾಡಿದ್ದಾರೆ. ಅದರ ಬಗ್ಗೆ ಈ ಮೊದಲು ಸದನದ ಗಮನಕ್ಕೆ ತರಲಾಗಿದೆ. ಅದನ್ನೂ ಕೂಡ ವಿತ್‌ಡ್ರಾ ಮಾಡುವ ಹಾಗೆ ಮಾಡಿಕೊಂಡು ಸಾರ್ವಜನಿಕ ಹೋರಾಟ ಮಾಡುವಂಥಹ ಸಂದರ್ಭದಲ್ಲಿ ವಿನಾಃ ಕಾರಣ ಪೋಲೀಸ್‌ನವರು ಕೇಸುಗಳನ್ನು ಹಾಕದ ಹಾಗೆ ಮಾಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ (ಕಲಘಟಗಿ) : ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಮಾನ್ಯ ಕಾನೂನು ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಒಂದು ಸಾರಿ ತಮ್ಮನ್ನು ಭೇಟಿಯಾಗಿದ್ದೇನೆ. ಕಲಘಟಗಿ ತಾಲ್ಲೂಕಿನಲ್ಲಿ 4 ವರ್ಷದ ಹಿಂದೆ ನನ್ನ ಮೇಲೆ ಒಂದು ಕೇಸು ಇದೆ, ಇದರ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ. ನಾನು ರೈತರ ಬೇಡಿಕೆಯ ಬಗ್ಗೆ ಹೋರಾಟ ಮಾಡಿದ್ದೇನೆ ಇದರ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ.

ಶ್ರೀ ಹೆಚ್. ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಪ್ಲೀ ಬಾರಗೈನಿಂಗ್ ಒಳಗಡೆ ಕನ್‌ಫೆಕ್ಷನ್ ಮಾಡಿಕೊಳ್ಳಬೇಕಾಗುತ್ತದೆ. ಚಿಕ್ಕನಗೌಡ್ರಿಗೆ ಬಹಳ ಒಳ್ಳೆಯ ಅವಕಾಶ, ಕನ್‌ಫೆಕ್ಷನ್ ಮಾಡಿಕೊಳ್ಳಿ ಅದು ಬೇಗನೆ ಮುಗಿದು ಹೋಗಿಬಿಡುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಅವರ ಮೇಲೆ ಯಾವ ರೀತಿಯಾಗಿ ಕೇಸ್‌ಗಳನ್ನು ಹಾಕಿದ್ದಾರೆಂದರೆ, ಅವರು ಹೋರಾಟ ಮಾಡಿರುವುದು ಒಂದೇ, ತಹಶೀಲ್ದಾರ್‌ರವರ ಕಛೇರಿಗೆ ಹೋಗಿ ಮುತ್ತಿಗೆ ಹಾಕಿದರು. ರೇಷ್ಮೆ ಇಲಾಖೆಯದು ಒಂದು ಕೇಸ್, ರೆವಿನ್ಯೂ ಇಲಾಖೆ, ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ಒಂದೊಂದು ಇಲಾಖೆಯು ಈ ತರಹ ಒಟ್ಟು 10 ಕೇಸುಗಳನ್ನು ಅವರ ಮೇಲೆ ಹಾಕಿದ್ದಾರೆ. ಅವರು ಹೋರಾಟ ಮಾಡಿರುವುದು ಒಂದೇ.

ಶ್ರೀ ಹೆಚ್. ಕೆ. ಪಾಟೀಲ್ : ಅವರು ಎಲ್ಲಾ ಆಫೀಸ್‌ಗಳಿಗೆ ಕೀಲಿ ಹಾಕಿದ್ದರಲ್ಲಾ, ಅದಕ್ಕಾಗಿ ಈ ರೀತಿಯಾಗಿ ಕೇಸುಗಳನ್ನು ಹಾಕಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಸನ್ಮಾನ್ಯ ಗೌರವಾನ್ವಿತ ಸದಸ್ಯರಾದ ಜಗದೀಶ್ ಶೆಟ್ಟರ್, ಮಾನ್ಯ ಶ್ರೀರಾಮರೆಡ್ಡಿಯವರು, ಜಯಪ್ರಕಾಶ್ ಹೆಗ್ಡೆಯವರು, ಬೋಪಯ್ಯ ಹಾಗೂ ಬಂಗೇರಾರವರು ಇವರೆಲ್ಲರೂ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಿಂತ ಹೆಚ್ಚಾಗಿ ನಮ್ಮ ಸರ್ಕಾರದ ಈ ಹೊಸ ಹೆಜ್ಜೆಯನ್ನು ಚಿಂತನೆಯನ್ನು ಅದಕ್ಕೆ ಬೆಂಬಲಿಸಿ ಈ ಬಿಲ್ ಅನ್ನು ಸ್ವಾಗತ ಮಾಡಿದ್ದಾರೆ. ಅವರವರ ಮಾತುಗಳಲ್ಲಿ ಒಬ್ಬೊಬ್ಬರು ಒಂದೊಂದನ್ನು

ಎತ್ತಿತೋರಿಸಿದ್ದಾರೆ. ಬ್ರಿಟಿಷರ ಕಾಲದಲ್ಲಿ ಇದ್ದಂತಹ ಸಿಆರ್‌ಪಿಸಿ, ಅವರ ಇನ್‌ಫ್ಲೂಯೆನ್ಸ್‌ನಿಂದ ಸಿದ್ಧವಾಗಿರತಕ್ಕಂತಹ ಸಿಆರ್‌ಪಿಸಿ ಅದು ಸತ್ಯಕ್ಕೆ ದೂರವಾದುದು ಏನು ಅಲ್ಲ ಬ್ರಿಟಿಷ್ ಅಧಿಕಾರಿಗಳು, ಬ್ರಿಟಿಷ್ ಜಡ್ಜರು, ಬ್ರಿಟೀಷ್ ವ್ಯವಸ್ಥೆಯೊಳಗಡೆ ಏನು ಜನರನ್ನು ಗಮನಿಸುತ್ತಿದ್ದರು. ಅದೇ ರೀತಿಯಾಗಿ ಗಮನಿಸುವಂತಹ ಕಾನೂನುಗಳು ಆಗಿವೆ ಎನ್ನುವುದರ ಟೀಕೆ ಟಿಪ್ಪಣಿ, ವಿಮರ್ಶೆಯ ಬಗ್ಗೆ ನಾವು ಪ್ರತಿನಿತ್ಯ ಕೇಳುತ್ತಿದ್ದೇವೆ. ಅದಕ್ಕಾಗಿ ಈ ಬದಲಾವಣೆಯನ್ನು ತರಬೇಕೆಂದು ಹೇಳಿ ನಾವು ಈ ಸಂದರ್ಭದಲ್ಲಿ ಮುಂದೆ ಬಂದಿದ್ದೇವೆ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ರೈತರ ಕೇಸುಗಳ ಬಗ್ಗೆ ಪ್ರಸ್ತಾಪ ಮಾಡಿದರು. ಹೋರಾಟಗಾರರ ಮೇಲಿರುವ ಕಟ್ಟಳೆಗಳ ಬಗ್ಗೆ ಪ್ರಸ್ತಾಪ ಮಾಡಿದರು. ಅದನ್ನೆ ಮಾನ್ಯ ಜಗದೀಶ್ ಶೆಟ್ಟರ್‌ರವರೂ ಸಹಿತ ಎತ್ತಿ ಮಾತನಾಡಿದ್ದಾರೆ. ಅದರ ಬಗ್ಗೆ ನಂತರದಲ್ಲಿ ಬರುತ್ತೇನೆ. ಅದರ ಜೊತೆಗೆ ಶ್ರೀರಾಮರೆಡ್ಡಿಯವರು ಸೆಕ್ಷನ್ 436ನ್ನು ಒಪ್ಪುತ್ತಾ ಕೆಲವು ಸಲಹೆಗಳನ್ನು ಕೊಟ್ಟಿರುತ್ತಾರೆ. ಒಂದೊಂದಕ್ಕೂ ಒಂದೂಂದು ಹೆಜ್ಜೆಯನ್ನು ನಾವು ಇಡಬೇಕಾಗುತ್ತದೆ. ಆ ರೀತಿಯಾಗಿ ಇಡೋಣ, ಸನ್ಮಾನ್ಯ ಬೋಪಯ್ಯನವರು ಸೆಕ್ಷನ್ 167 ಅನ್ನು ಏಕೆ ತಪ್ಪು ಅರ್ಥೈಸಿಕೊಂಡರೋ ಗೊತ್ತಿಲ್ಲ. ಈಗಾಗಲೇ ಸುಪ್ರಿಂಕೋರ್ಟ್ ಆದೇಶದನ್ವಯ ಹತ್ತು ಹಲವು ಪ್ರಕರಣ ಗಳಲ್ಲಿ ನಾವು ಈ ರೀತಿಯಾದ ವ್ಯವಸ್ಥೆ ಮಾಡುತ್ತೇವೆ. ಅಲ್ಲಿ ನಾವು ಸ್ಯಾಯಸಿಗುತ್ತದೆಂದು ಒಪ್ಪುತ್ತೇವೆ. ಆದರೆ ಇಲ್ಲಿ ನಾವು ಅಮೆಂಡ್‌ಮೆಂಟ್‌ನ್ನು ತಂದಾಗ ಆ ಭಾವನೆ ತಮಗೆ ಏತಕ್ಕಾಗಿ ಬಂತೋ ಗೊತ್ತಿಲ್ಲ. ಆದರೆ ನಾನು ಒಂದಂತೂ ಸ್ಪಷ್ಟ ಮಾಡುತ್ತೇನೆ. ಈ ಹೊಸ ವ್ಯವಸ್ಥೆಯನ್ನು ಹೊಸ ಹೊಸ ಟೆಕ್ನಿಕ್‌ನ್ನು ಜನರ ಅನುಕೂಲಕ್ಕಾಗಿ ನಾವು ಮಾಡಬೇಕಾಗುತ್ತದೆ. ಸೆಕ್ಷನ್ 167ನೇ ತಿದ್ದುಪಡಿಯ ಜೊತೆಗೆ ಇವತ್ತು ಶಿಕ್ಷೆ ಚೌಕಾಶಿಯ ಒಟ್ಟು ಚಾಪ್ಟರ್‌ನ್ನು ನಾವು ಈ ಸಿಆರ್‌ಪಿಸಿ ಅಮೆಂಡ್‌ಮೆಂಟ್‌ನಲ್ಲಿ 265(ಎ), 265(ಬಿ), 265(ಸಿ)ಯನ್ನು ಒದಗಿಸಿದ್ದೇವೆ. ಅದರ ಜೊತೆಗೆ 265(ಡಿ) ನ್ನು ಸಹಿತ ಈ ವಿಧೇಯಕದಲ್ಲಿ ಅಳವಡಿಸಿಕೊಂಡಿದ್ದೇವೆ. ಇದರ ಮೂಲಕ ಬಡವರಿಗೆ ಅನುಕೂಲವಾಗುತ್ತದೆ. ಹಾಗೂ ಫಸ್ಟ್ ಟೈಮ್ ಅಫೆನ್ಸ್ ಮಾಡಿದವರಿಗೆ ಅನುಕೂಲವಾಗುತ್ತದೆ. ಯಾರು ಅನಾವಶ್ಯಕವಾಗಿ ವ್ಯಾಜ್ಯವನ್ನು ಮುಂದುವರಿಸಿಕೊಂಡು ಹೋಗಬೇಕೆನ್ನುವಂತಹ ಆಸಕ್ತಿ ಇರುವುದಿಲ್ಲ, ಅವರಿಗೆ ಅನುಕೂಲವಾಗುತ್ತದೆ, ಅದರ ಜೊತೆಗೆ ನಮ್ಮ ದೇಶದೊಳಗಡೆ ಈಗ ಇದ್ದಂತಹ 5 ಪರ್ಸೆಂಟ್ ಕನ್‌ವಿಕ್ಷನ್ ರೇಟ್ ಏನು ಇದೆ, ಇದು ಒಂದು ರೀತಿಯಲ್ಲಿ ಗಣನೀಯವಾದ ಪ್ರಮಾಣದಲ್ಲಿ ಹೆಚ್ಚಾಗುತ್ತದೆ ಏಕೆಂದರೆ, ಪ್ರಮಾಣಿಕವಾಗಿ ನಾವು ಮಾಡಿದ ತಪ್ಪನ್ನು ಒಪ್ಪಿಕೊಳ್ಳುತ್ತೇವೆ. ಮಾನ್ಯ ಸ್ನೇಹಿತರೊಬ್ಬರು ಹೇಳಿದರು, ಆಕ್ಸಿಡೆಂಟ್ ಆಗುವಂತಹ ಸಂದರ್ಭದಲ್ಲಿ ಸಣ್ಣ ಆಕ್ಸಿಡೆಂಟ್ ಆಗಿರುತ್ತದೆ, ಅದನ್ನು ನಾವ್ಯಾರೂ ಅಲ್ಲಗಳೆಯುವುದಕ್ಕೆ ಆಗುವುದಿಲ್ಲ ಅದನ್ನು ನಾವು ಕನ್‌ಫೆಸ್ ಮಾಡುತ್ತೇವೆ. 5000, 10000 ಮತ್ತು 100000 ರೂಗಳು ದಂಡಗಳಾಗಬಹುದು, ಅದು ಎಷ್ಟೇ ಆಗಲಿ ಆಕ್ಸಿಡೆಂಟ್‌ನ್ನು ಸಹಿತ ಇವತ್ತು ಒಪ್ಪಿಕೊಂಡು ಕೇಸು ಮುಗಿಸಿಕೊಳ್ಳುವುದಕ್ಕೆ ಅವಕಾಶವಿಲ್ಲದಿರುವಂತಹ ಸಂದರ್ಭದಲ್ಲಿ ಈ ವ್ಯವಸ್ಥೆ ಬದಲಾಗುತ್ತದೆ, ಅಂತಹ ಒಂದು ಹೊಸ ವಾತಾವರಣವನ್ನು ಸೃಷ್ಟಿ ಮಾಡುವುದರ ಜೊತೆಗೆ ಇದ್ದಂತಹ ಏನು ಪೆಂಡಿಂಗ್ ಕ್ರಿಮಿನಲ್ ಕೇಸಸ್‌ಗಳು ಇವೆ, ಆ ಪೆಂಡೆನ್ಸಿಗಳು ಸಾಕಷ್ಟು ಕಡಿಮೆಯಾಗುತ್ತದೆ. ಕೆಲವು ಕ್ಯಾಲಿಫೋರ್ನಿಯಾ ಡಿಸ್ಟ್ರಿಕ್ಟ್ ಬಗ್ಗೆ ಮಾನ್ಯ

ಜಯಪ್ರಕಾಶ್ ಹೆಗ್ಡೆಯವರು ಎಕ್ಸಾಂಪಲ್‌ನ್ನು ಕೊಟ್ಟರು. ಅಲ್ಲಿ 94.5 ಪರ್ಸೆಂಟ್ is the conviction rate. The acquittal is hardly 0.5%. ಕಾರಣವೆಂದರೆ, ಅಲ್ಲಿ ಒಂದು ತಪ್ಪು ಒಪ್ಪಿಕೊಳ್ಳುತ್ತಾರೆ, ಎರಡು ತಪ್ಪು ಪ್ರಕರಣಗಳು ಕಡಿಮೆ ರಿಜಿಸ್ಟಾರ್ ಆಗುತ್ತದೆನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ ನಂಬರ್ ಆಫ್ ಕೇಸಸ್‌ಗಳನ್ನು ನೋಡಿದಾಗ ಒಂದು ವರ್ಷದಲ್ಲಿ 15 ಸಾವಿರ ಕೇಸುಗಳು ಅಲ್ಲಿ ರಿಜಿಸ್ಟರ್ ಆಗಿವೆ. ಅಷ್ಟಾಗಿಯೂ ಕೂಡ ಕನ್‌ವಿಕ್ಷನ್ ರೇಟ್ ಈ ಪ್ರಮಾಣದಲ್ಲಿ ಆಗುತ್ತದೆಂದರೆ They give that credit to the pleas bargaining system. ಅದೇ ಪ್ಲೀ ಬಾರಗೈನಿಂಗ್ ಸಿಸ್ಟಮ್‌ಅನ್ನು ಶಿಕ್ಷೆಯ ಚೌಕಾಸಿಯ ವ್ಯವಸ್ಥೆಯನ್ನು ಈ ಸಂದರ್ಭದಲ್ಲಿ ನಾವು ತರುವುದರ ಮೂಲಕ ರಾಷ್ಟ್ರದಲ್ಲಿಯೇ ಮೊಟ್ಟ ಮೊದಲಿಗೆ ನಾವು ಶಿಕ್ಷೆ ಚೌಕಾಸಿಯ ವ್ಯವಸ್ಥೆಯನ್ನು ತಂದಂತಹ ರಾಜ್ಯವಾಗುತ್ತದೆ. ಆ ಒಂದು ಕಾರಣದಿಂದ ತಾವು ಎನು ಬೆಂಬಲ ಕೊಟ್ಟಿದ್ದೀರಿ, ಆ ಬೆಂಬಲ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ ರೈತರ ಮೇಲೆ ಇದ್ದಂತಹ ಪ್ರಕರಣಗಳನ್ನು ವಾಪಸ್ಸು ಪಡೆದುಕೊಳ್ಳುವುದರ ಬಗ್ಗೆ ಈಗಾಗಲೇ ನಾವು ಕ್ಯಾಬಿನೆಟ್‌ನಲ್ಲಿ ನಿರ್ಣಯ ಮಾಡಿದ್ದೇವೆ. ಆದರೆ ಅದನ್ನು ನಾವು ಸಾರಸಗಟಾಗಿ ಮಾಡುವುದಕ್ಕಾಗುವುದಿಲ್ಲ. ಒಂದೊಂದು ಪ್ರಕರಣಗಳನ್ನು ತರಿಸಿ ಮಾಡುತ್ತಿದ್ದೇವೆ. ಅದರಲ್ಲಿ ಪ್ರಗತಿ ಸಾಕಷ್ಟು ಆಗಿದೆ. ಯಾವುವು ಉಳಿದಿದೆ ಅದನ್ನು ಯಾರಾದರೂ ಶಾಸಕರು ಗಮನಕ್ಕೆ ತಂದರೆ ಅವುಗಳನ್ನು ಸಹಿತ ಪರಿಗಣನೆಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ. ಈಗ ನೀರಾದ ಮೇಲೆ ಕೇಸ್ ಹಾಕಿದ್ದೀರಿ, ನೀರಾವನ್ನು ನೀವು ಪರ್ಮಿಟ್ ಮಾಡಿದ ಮೇಲೆ ಆಟೋಮ್ಯಾಟಿಕ್ ಆಗಿ ಅದು ವಿತ್‌ಡ್ರಾ ಆಗಬೇಕು. ಕೆ. ಇ. ಬಿ. ದು ಕೇಸ್ ಹಾಕಿದ್ದೀರಿ, ಕೆಇಬಿಯದು 2003ನೇ ಇಸವಿಯವರೆಗೂ ಸೇವೆ ಮಾಡಿದ್ದೀರೆಂದರೆ ಅದು ಆಟೋಮ್ಯಾಟಿಕ್ ಆಗಿ ವಿತ್‌ಡ್ರಾ ಆಗುತ್ತದೆ. ಹಾಗೆ ಎನಾದರೂ ಒಂದು ಸೂಚನೆಯನ್ನು ಕೊಡಿ. ಬಹಳ ಇದೆ, ರೈತರ ಜೊತೆಗೆ ಸ್ಟೂಡೆಂಟ್ಸ್ ಮತ್ತು ಲೇಬರ್‌ಗಳ ಸ್ಟ್ರೈಕ್ ಮಾಡಿ ಕೇಸುಗಳಿವೆ ಅದನ್ನು ಏನಾದರೂ ಮಾಡಿ ವಿತ್‌ಡ್ರಾ ಮಾಡಬೇಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ರೈತರ ಮೇಲೆ ಹಾಕಿರುವ ಎಲ್ಲಾ ಕೇಸುಗಳನ್ನು ವಿತ್‌ಡ್ರಾ ಮಾಡಬೇಕು. ಹೋರಾಟಗಾರರ ಮೇಲೆ ಹಾಕಿರುವ ಕೇಸುಗಳು ಅಂದರೆ ಚಳವಳಿಯಲ್ಲಿ ಭಾಗವಹಿಸಿರತಕ್ಕಂತಹ ಕೇಸುಗಳು . . .

ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) : ರೈತರ ಮೇಲೆ ಹಾಕಿರುವ ಕೇಸುಗಳನ್ನು ಈಗಾಗಲೇ ವಿತ್‌ಡ್ರಾ ಮಾಡಲಿಕ್ಕೆ ರಾಜ್ಯದ ಸಚಿವ ಸಂಪುಟದಲ್ಲಿ ನಿರ್ಣಯಿಸಲಾಗಿದೆ. ಉಳಿದಿರುವ ಕೇಸುಗಳನ್ನು ಹಿಂಪಡೆಯುವ ಬಗ್ಗೆ ಪ್ರಕ್ರಿಯೆ ಪ್ರಾರಂಭ ಮಾಡಿದ್ದೇವೆ. ಇದನ್ನು ಇನ್ನೂ ಸ್ವಲ್ಪ ತೀವ್ರಗೊಳಿಸುತ್ತೇವೆ. ತಾವು ಪ್ರಸ್ತಾಪ ಮಾಡಿರುವ ಉಳಿದ ಪ್ರಕರಣಗಳ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ವಿದ್ಯಾರ್ಥಿ, ಕಾರ್ಮಿಕರ ಮೇಲೆ ಹಾಕಿರುವ ಕೇಸುಗಳು

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇನ್ ಪರ್ಸನಲ್ ಜ್ಯೂಡಿಲಿ ಕೋರ್ಟ್ ಮುಂದೆ ಪ್ರೆಸೆಂಟ್ ಮಾಡಬೇಕೆಂದರೆ, ಅವರ ಅಡ್ವೋಕೇಟ್ ಒಂದು ಅಪ್ಲಿಕೇಶನ್ ಹಾಕಿ.. he can ask the Court. ಅನುಮಾನಗಳೇನಾದರೂ ಇದ್ದರೆ ಅಂತಹ ವ್ಯಕ್ತಿಗಳನ್ನು ಪ್ರೊಡ್ಯೂಸ್ ಮಾಡಿ ಎಂದು ಕೇಳಿದರೆ ಆ ರೀತಿ ಮಾಡಬಹುದು.

ಶ್ರೀ ಜೆ. ಸಿ. ಮಾಧುಸ್ವಾಮಿ : ಫೇಲ್ ಆಗುವುದೇ ಎರಡೂ ಪಾರ್ಟಿ ಒಪ್ಪಿಕೊಂಡಾಗ.....

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಕೋರ್ಟ್ ಮುಂದೆ ಪ್ರಸೆಂಟ್ ಮಾಡಬೇಕು.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಭೀಮಾ ನದಿಯ ನೀರಿನ ಹೋರಾಟದ ಸಂದರ್ಭದಲ್ಲಿ ಈ ಹಿಂಡಿ ಹಾಗೂ ಸಿಂಧಗಿ ತಾಲ್ಲೂಕು ಜನರ ಮೇಲೆ ಮಹಾರಾಷ್ಟ್ರ ಸರ್ಕಾರದವರು ಹಲವು ಕೇಸುಗಳನ್ನು ಹಾಕಿದ್ದಾರೆ. ಹಾಗಾಗಿ ನಮ್ಮ ಸರ್ಕಾರವು ಮಹಾರಾಷ್ಟ್ರ ಸರ್ಕಾರದವರೊಡನೆ ಮಾತನಾಡಿ ಅವರ ಮೇಲಿರುವ ಕೇಸುಗಳನ್ನು ತೆಗೆಯಲಿಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಹೆಚ್. ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಆಗಲೇ ನಾನು ಪ್ರಸ್ತಾಪ ಮಾಡಿ ಹೇಳಿದೆ ರೈತರ ಹೋರಾಟದ ವ್ಯಾಪ್ತಿಯಲ್ಲಿ ಆ ಕೇಸುಗಳು ಬರತ್ತವೆ. ಅದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಸದನಕ್ಕೆ ಹಾಗೂ ತಮಗೆ ಈ ಮೂಲಕ ನಾನು ಒಂದು ಸಣ್ಣ ತಿದ್ದುಪಡಿಯ ಬಗ್ಗೆ ತಿಳಿಸಲಿಚ್ಚಿಸುತ್ತೇನೆ. ಈ "ಶಿಕ್ಷೆ ರಾಜಿ ಶಬ್ದದ ಬಳಕೆ ಮಾಡಿದ್ದೇವೆ, ಚರ್ಚೆಯಲ್ಲಿ ಬಂದಿರತಕ್ಕಂತಹ ಸಲಹೆಗಳ ಹಿನ್ನೆಲೆಯಲ್ಲಿ ಈ ಶಿಕ್ಷೆ ರಾಜಿ ಶಬ್ದದ ಬಳಕೆಯ ಬದಲಾಗಿ ಈ ಶಿಕ್ಷೆ ಚೌಕಾಶಿಯ ಶಬ್ದ ಬಳಕೆಯಾಗುವುದು ಸೂಕ್ತವೆಂದು ಶಿಕ್ಷಣ ತಜ್ಞಾರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಆ ಒಂದು ಸಣ್ಣ ತಿದ್ದುಪಡಿಯನ್ನು ಆ ಮಸೂದೆಯೊಳಗೆ ಅಂಗೀಕಾರ ಮಾಡಿಕೊಂಡು ಅದನ್ನು ಪಾಸ್ ಮಾಡಬೇಕಾಗಿ ವಿನಂತಿ ಮಾಡುತ್ತೇನೆ.

ಶ್ರೀ ನೆ. ಲ. ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಬೆಂಗಳೂರಿನ ಸುತ್ತಮುತ್ತ ರಿಂಗ್ ರೋಡ್‌ಗಳನ್ನು ಮಾಡುವಾಗ ಅಲ್ಲಿ ರೆವಿನ್ಯೂ ಸೈಟ್‌ಗಳ ಮಾಲೀಕರು ಬಡವರು ಹೋರಾಟ ಮಾಡಿದಾಗ ಅವರ ಮೇಲೆ ಕೇಸುಗಳಾಯಿತು. ಈಗ ನಂದಿನಿ ಲೇಔಟ್ ಬಳಿ ಒಂದು ರಿಂಗ್ ರಸ್ತೆ ಕೂಡ ಆಗಿದೆ. ದಯಮಾಡಿ ಅಲ್ಲಿನ ಜನರ ಮೇಲೆ ಹಾಕಿರುವ ಕೇಸುಗಳನ್ನು ವಿತ್‌ಡ್ರಾ ಮಾಡಿದರೆ ಜನಗಳು ವಿನಾಕಾರಣ ಕೋರ್ಟಿಗೆ ಅಲೆದಾಡುವುದು ತಪ್ಪುತ್ತದೆ. ದಯಮಾಡಿ ಆ ಕೇಸುಗಳನ್ನು ವಿತ್‌ಡ್ರಾ ಮಾಡಬೇಕಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಕೆ. ಪಾಟೀಲ್ : ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2005ನೇ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಖಂಡ2 ಅನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 3ಕ್ಕೆ ತಿದ್ದುಪಡಿ

ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ 3ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ:

"ಶಿಕ್ಷೆ ರಾಜಿ ಎಂಬ ಪದದ ಬಳಕೆಗೆ ಬದಲಾಗಿ ಶಿಕ್ಷೆ ಚೌಕಾಸಿ ಎಂಬ ಪದ ಹಾಗೂ ಶಿಕ್ಷೆ ರಾಜಿಗಾಗಿ ಎಂದು ಬರುವ ಕಡೆಗಳಲ್ಲಿ ಶಿಕ್ಷೆಚೌಕಾಸಿಗಾಗಿ ಎಂದು ತಿದ್ದುಪಡಿ ಮಾಡಿಕೊಳ್ಳುವುದು."

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಶಿಕ್ಷೆ ರಾಜಿ ಎಂಬ ಪದದ ಬಳಕೆಗೆ ಬದಲಾಗಿ ಶಿಕ್ಷೆ ಚೌಕಾಸಿ ಎಂಬ ಪದ ಹಾಗೂ ಶಿಕ್ಷೆ ರಾಜಿಗಾಗಿ ಎಂದು ಬರುವ ಕಡೆಗಳಲ್ಲಿ ಶಿಕ್ಷೆಚೌಕಾಸಿಗಾಗಿ ಎಂದು ತಿದ್ದುಪಡಿ ಮಾಡಿಕೊಳ್ಳುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಖಂಡ 3 ತಿದ್ದುಪಡಿಯಾದ ರೀತಿಯಲ್ಲಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

" ಖಂಡ 3 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 3 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 4

ಅಧ್ಯಕ್ಷರು : ಪ್ರಸ್ತಾವ ಎನೆಂದರೆ "ಖಂಡ 4 ಈ ವಿಧೇಯಕದ ಅಂಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, " 2005ನೇ ಸಾಲಿನ ದಂಡದ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, " 2005ನೇ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಅನುಬಂಧ IV)

4. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮೇಲೆ ಚರ್ಚೆ, ಉತ್ತರ ಹಾಗೂ ಮತಕ್ಕೆ ಹಾಕುವುದು.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2005-06ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಅನ್ನು ಮಂಡಿಸಿದ್ದೇನೆ. ಪ್ರತಿ ಆರ್ಥಿಕ ವರ್ಷದಲ್ಲಿ ಬಜೆಟ್‌ನಲ್ಲಿ ನಾವು ಸೇರಿಸಲಿಕ್ಕೆ ಆಗದಿರುವಂತಹ ಹಣ, ಸಾಲದೇ ಹೋದಾಗ ಹೆಚ್ಚುವರಿಯಾಗಿ ಕೊಡಬೇಕಾಗಿರುವಂತಹದು, ಹೊಸ ಕಾರ್ಯಕ್ರಮಗಳಿಗೆ ಬಜೆಟ್‌ನಲ್ಲಿ ಹಣ ಒದಗಿಸದಿರುವಾಗ ಅದನ್ನು ಪೂರಕ ಅಂದಾಜುಗಳಲ್ಲಿ ಒದಗಿಸುವಂತಹದು, ಜೊತೆಗೆ ಕೆಲವು ಖರ್ಚುಗಳು ಅನಿರೀಕ್ಷಿತವಾಗಿ ಬರುತ್ತವೆ. ಇವೆಲ್ಲವನ್ನೂ ಕೂಡ ಸಾದಿಲ್ವಾರು ನಿಧಿಯಿಂದ ಮಂಜೂರು ಮಾಡಿ . . . . .

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪ ಮುಖ್ಯಮಂತ್ರಿಗಳು ಓದುತ್ತಿರುವ ಪೂರಕ ಅಂದಾಜುಗಳ ಪ್ರತಿಗಳು ನಮಗೆ ಬಂದಿಲ್ಲ.

ಅಧ್ಯಕ್ಷರು : ಅಜೆಂಡಾದಲ್ಲಿ ಕಳುಹಿಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇದರ ಮೇಲೆ ಚರ್ಚೆ ಮಾಡಬೇಕಾದರೆ ನಮಗೆ ಪ್ರತಿಗಳು ಬೇಕು. ನಮಗೆ ಪ್ರತಿಗಳು ಬಂದಿಲ್ಲ.

ಅಧ್ಯಕ್ಷರು : ಪ್ರತಿಗಳನ್ನು ಕೊಡಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ವಾಟಾಳ್ ನಾಗರಾಜ್ ಅವರೇ, ಅಜೆಂಡಾ ಜೊತೆಗೆ ಹೋಗಿರುತ್ತದೆ ನೋಡಿ.

ಶ್ರೀ ಜೆ. ಪಿ. ಮಾಧುಸ್ವಾಮಿ : ಇಲ್ಲ, ಬಂದಿಲ್ಲ.

ಶ್ರೀ ಸಿದ್ಧರಾಮಯ್ಯ : ಈಗ ಓದುತ್ತೇನೆ, ಪ್ರತಿಗಳನ್ನು ತಮಗೆ ತರಿಸಿಕೊಡುತ್ತಾರೆ. ಆಗಬಹುದೇ?

ಶ್ರೀ ವಾಟಾಳ್ ನಾಗರಾಜ್ : ಆಗಬಹುದು, ತಾವು ಓದಬಹುದು.

ಶ್ರೀ ಸಿದ್ಧರಾಮಯ್ಯ : ಹಾಗಾಗಿ ಈ ಎಲ್ಲಾ ಖರ್ಚುಗಳನ್ನು . . . . .

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ಒಂದು ಮನವಿ ಪ್ರತಿಗಳನ್ನು ನಮಗೆ ಕೊಡುವವರೆಗೆ ನಿಯಮ 69ರ ಪ್ರಕಾರ 45 ವಿಷಯಗಳ ಬಗ್ಗೆ ಚರ್ಚೆ ಮಾಡೋಣ.